ಪಾರಸಿಕರು

ಪಾತ್ರಗಳು

ದರ್‍ಯವುಷ್ : ಕ್ಷಯಾರ್ಷನ ತಂದೆ (ಪ್ರೇತರೂಪದಲ್ಲಿ)
ಕ್ಷಯಾರ್ಷ : ಪರ್ಷಿಯಾದೇಶದ ಚಕ್ರವರ್ತಿ
ಹುತೌಶ : ದರ್‍ಯವುಷನ ಹೆಂಡತಿ, ಕ್ಷಯಾರ್ಷನ ತಾಯಿ
ದೂತ
ಮೇಳದವರು (ಪರ್ಷಿಯದ ಹಿರಿಯರು)

ಸ್ಥಳ

ಸೂಸ ರಾಜಧಾನಿಯಲ್ಲಿ, ಕ್ಷಯಾರ್ಷನ ಆರಮನೆಯ ಮುಂದೆ

ಕಾಲ

ಸೆಲಾಮಿಸ್ ಯುದ್ಧವಾದ ಮೇಲೆ.

ಮೇಳ : ಪಾರಸಿಕರಸಾಧ್ಯಬಲಂ
ಪೆರ್ಚಿದ ಹೆಲಸಿರಿಯೆ ಪೋಗೆ,
ನಾವುಳಿದೆವು ನಚ್ಚಿನವರ್
ತಾಯ್‌ನಾಡೊಳ್ ಕಾವಲಾಗಿ;
ಆಯ್ದು ಕುಲದ ಪಿರಿಯರೆಂದು
ತನ್ನ ಪೊನ್ನ ರನ್ನದ ಕರು–
ಮಾಡಂಗಳೊಳೆಮ್ಮನಿಟ್ಟು,
ಮಲೆತ ಯವನರುರ್ಕ ಮುರಿಯೆ
ತಾನೆ ಪೋದನೆಮ್ಮ ದೊರೆ,
ಸಾಸಿರ ಸತ್ರಪರ ಮೊರೆ,
ಆರ್‍ಯ ದರ್‍ಯವುಷನ ಮಗನ್,
ಶ್ರೀಕ್ಷಯಾರ್ಷನಮಿತಭಗನ್.
ಪೋದವನೋ ಮರಳನೇ!
ಪೋದವನಾ ಪೋರಾಣ್ಮನ್,
ಪೋದವರಾ ಪೊನ್ನಾಳ್ಗಳ್

ಬಾರದೆ ಬಗೆ ಬೆದರುತಿಹುದು :
ತಲ್ಲಣಿಸುವುದುಸಿರು ಪಾರಿ
  ಪೊಲ್ಲದೆಣಿಸಿ.
ಐಷ್ಯದ ತಿರುಳೆಲ್ಲ ಪೋಯ್ತು,
ಬಲ್ಲಾಳ್ಗಳ್! ಎಳೆಯನೊಡೆಯ!–
ಒಬ್ಬನಾಳೊ, ಕುದುರೆಯವನೊ,
  ಪರ್ಸಕೊಸಗೆ ತಾರನೇ!
ಪಿರಿಯ ಪಡೆ–ಸಿರಿಯ ಪಡೆ–
ಗೆಲುವ ಪಡೆ–ಕೊಲುವ ಪಡೆ–
ನಗುತ ನಗುತ ಪೋದ ಪಡೆ–
  ಅದರ ತಲೆಯ ಕಾಣದೆ!
  ಅದರ ಸೆಲೆಯೆ ಕೇಳದೆ!
  ಕುಣಿಕುಣಿಯುತ ಪೋಯ್ತು ಬಲಂ!
ಪಾರಸಿಕರಜೇಯಬಲಂ!
ಶ್ರೀಕ್ಷಯಾರ್ಷ ಪುಣ್ಯಫಲಂ,
ಅಕ್ಷಯಸಾಮ್ರಾಜ್ಯಬಲಂ!
ಓಲೆಯಟ್ಟೆ ದೊರೆಯ ದೊರೆ,
ತಲೆಯೊಳಿಟ್ಟು ನಡೆದು ಬರೆ,
ಗಾಳಿ ಬೀಸೆ, ಕೆರಳಿ ತೆರೆ,
ಹೊಮ್ಮಿ, ಚಿಮ್ಮಿ, ಮಿನುಗೆ ನೊರೆ,
ಬೀಸಿ ಬರ್ಪ ಕಡಲ ಪೊನಲ್
ನೆಲನ ನುಂಗಿಕೊಳುವುದೆನಲ್,
ನಾಡ ನಾಡ ರಾಯರೆಲ್ಲ
ಕೂಡ ಕೂಡ ನೆರೆದರೆಲ್ಲ,
ಐಷ್ಯದ ಸರ್ವಸ್ವವೆಲ್ಲ–
ಸೂಸಪುರದ, ಎಕ್ಬಟನದ,
ಪರ್ಸದ ಪಲ ಪಳಮೆಪೊಳಲ,
ಪೊನ್ ಮಿಂಚುವ ಪಡೆಗಳೆಲ್ಲ–
ಕಿಳಿರ್ದು ನೆಗೆವ ಕುದುರೆಗಳುಂ,
ಮೊಳಗಿ ಪಾಯ್ವ ತೇರುಗಳುಂ,
ಕೆಚ್ಚೆದೆ ಕಲಿ ಕಾಲಾಳುಂ,
ಮೆಚ್ಚಿನ ಪೆರ್‌ನಾವೆಗಳುಂ,
ರಾಜರಾಜನಾಣೆಯಾಯ್ತು!
ಹೆಚ್ಚಿದ ಹೆಲಸಿರಿಯೆ ಪೋಯ್ತು!
ಪರ್ಸದ ಪಿರಿಯರಸುಕುಲಂ–
ಆಮಿಸ್ತ್ರೀಸ್, ಅರ್ತಫರಣ,
ಮೇಗಬಾಸ, ಅಸ್ತಾಶ್ವಿಸ್,
ಕುದುರೆಯಡರಿ, ಬಿಲ್ಲ ಪಿಡಿದು,
  ಮೆರೆಮೆರೆಯುತ ನಡೆದರೇ!
ನೋಡಿದರೆದೆ ನಡುನಡುಗೆ,
ಮಾರ್ಪಡೆಗಳ ಕೂರ್ಪುಡುಗೆ,

   ಪೋರ ಬಯಸಿ ಕಡೆದರೇ!
ಕುದುರೆಬೆಡಗನ್ ಅರ್ತಂಬರೀಸ್,
ಬಿಲ್ಲ ಜಾಣನ್ ಈಮಿಾಯಸ್.
ಮಾಸಿಸ್ತ್ರೀಸ್, ಫರನ್ದಕೀಸ್,
ತೇರೋಟದ ಸೋಸ್ಥಾನೀಸ್,
ಪಿರಿಯ ಬೆಳೆಯ ನೈಲ ಬಯಲ
ಭಟರ ಭಟರ್ ಪೆಗಸ್ತಗೋನ್,
ಸುಸಿಸ್ಕನೀಸ್, ಐಗುಪ್ತರ್ :
ಪುಣ್ಯದ ಪುರ ಮೆಂಫಿಗೊಡೆಯ
ಆರಸಮಿಾಸ್, ಬಲ್ನಿಟ್ಪಾಳ್ :
ಮುದುಪಳಮೆಯ ಥೀಬ್ಸಿನರಸು
ಅರಿಯೊಮರ್ದ್ದ, ಜೌಗುಗಳೆಡೆ
ಪಡಗುಪಳಕೆಯಾಳ ನೆರವಿ :
   ಎಣಿಕೆಗಳುಂಬಂ!
ಸಾಗರದೆಡೆ ಸುಖದ ಬಾಳ
ಪೊನ್ನೂರ್ಗ್ಗಳ ಲಿಡಿಯದವರ್ :
ಆಳ್ದನ ತೋಳ್, ಹೆಬ್ಬಯಕೆಯ
ಅರ್ಕತಿಯಸ್, ಮಿತ್ರಫತೀಸ್ :
ಪೊನ್ ಸಾರ್ದ್ದಿಸ್ ಕಳುಹೆ ನಲಿದು
ಎರಡು ನೊಗದ, ಮೂರು ನೊಗದ,
ಸುರಿಗೆತೇರನೇರಿದವರ್,
   ಪಗೆಗೆ ಸಾವನೀವವರ್ :
ಪಾವನಗಿರಿ ತೊಮೊಲದವರ್,
ತೊತ್ತು ನೊಗವ ಹೆಲನರಮೇ–
ಲಿಡಲು ಕುಣಿವ ಮರ್ದ್ದ, ಥರುಬಿಸ್;
ಭಲ್ಲೆಯೆಸೆವ ಮಿಸಿಯದವರ್ :
ಪೊನ್ನ ನಾಡು ಬೆಬಿಲೊನವರ್,
ನಾವೆ ನಚ್ಚು ಬಿಂಕದವರ್,
ಬಿಲ್ಲ ಕೋಲ ಪೊಂಕದವರ್,
ಖಡ್ಗವೊತ್ತರಂಕದವರ್–
ಅಂತು, ಇಂತು, ಅತ್ತ, ಇತ್ತ,
ಚಕ್ರವರ್ತಿಚಕ್ರವೆತ್ತ
ಪರಿವುದು ತಡೆಗೊಳದೆ ಸುತ್ತ,
ಏಷ್ಯದ ಜನಪದದ ಮೊತ್ತ,
ದೆಸೆದೆಸೆಗಳ ತಂಡ ತಂಡ,
ತಮ್ಮನಾಳ್ದ ಕೊಂಡ ಗಂಡ,
ಶ್ರೀಕ್ಷಯಾರ್ಷದೇವ ಕರೆಯೆ,
ಪರ್ಸದ ಪೊಸ ಅರಳು, ಪೂವು,
ಪೋಯ್ತು, ಪೋಯ್ತು ಪೊಯ್ವ ತಿರುಳು.
ಪಡೆಯ ಪೆತ್ತ ನಾಡೊಳೆತ್ತ
ಪಡೆದವರುಂ, ಪಿಡಿದವರುಂ,

ನೀಡು ತಡೆವ ದಿನಗಳೆಣಿಸಿ,
ಪಾರುತಿಹರ್, ಪಲುಬುತಿಹರ್–
ಒರ್ಪಂಬಲ್ ಪರ್ಸವೇ!

೧.೧

ತೆರೆ ಬಂದು ಬಂದೆದ್ದು ಹೆಡೆಯೆತ್ತಿ ಕಾರಿ
ಹೊರಳುವೆಡೆ, ಕೊಡೆಯೆತ್ತಿ, ಗದ್ದುಗೆಯನೇರಿ,
ದೊರೆಯಿವನ್, ದೊರೆಯವನ್ ಬಂದು ಬಂದೆರಗೆ,
ರಾಯದಳ, ಪಾಯದಳ, ದಳ ದಳದ ಪೆರಗೆ,
ಬಂದು ಬಂದೆತ್ತಲುಂ, ನೆಲ ನೆರೆಯದಲ್ಲಿ,
ಅಥಮಸನ ಮಗಳೊಮ್ಮೆ ದಾಂಟಿದೆಡೆಯಲ್ಲಿ,
ಯೂರೋಪಿನಿದಿರಲ್ಲಿ, ಬೀಡು ಬಿಟ್ಟಿಳಿಯೆ,
ಮೆಯ್ಯುಬ್ಬಿ, ಹುಬ್ಬೆತ್ತಿ, ಸುತ್ತ ಕಣ್ ಸುಳಿಯೆ,
ಆನಂದಬಾಷ್ಪವನು ಕರೆದನೆಮ್ಮರೆಯ,
ಕೋಟಿ ವೀರರ ವೀರ, ಕೋಟಿ ರಾಯರ ರಾಯ,
ಧರೆಯ ಲಕ್ಷ್ಮಿಯರ ತಲೆಲಕ್ಷ್ಮಿಯಾರಾಮ,
ಏಷ್ಯದಾ ಸಮ್ರಾಜ, ಸಾರ್ವಭೌಮ!

೧.೨

ದೇವನಾಣತಿಯಾಯ್ತು! ನಾಯಕರು ಕೂಡಿ,
ಹುಚ್ಚುನೆಗೆ ತೊಂಡು ಬೆಳ್‌ಗುದುರೆಗಳ ಹೂಡಿ
ಕೊಚ್ಚುವ ಸಮುದ್ರನನ್ ಕಟ್ಟಿ, ನೊಗ ಮೆಟ್ಟಿ,
ಬದಿಬದಿಗೆ ದೋಣಿಗಳ ತಂದು ತಂದೊಟ್ಟಿ
ನೇಣುಗಳ ಬಿಗಿಬಿಗಿದು ಹಲಗೆಗಳ ಹಾಸಿ,
ಜಲದ ಮೇಲೊಂದು ಹೊಸ ನೆಲದ ಹದಿ ಬೀಸಿ,
ಸುತ್ತಿರಿದ ನಾವೆಯಲಿ ಸಕಲ ಸುಖವಿರಿಸಿ,
ಇರುವೆ ಸಾಲಿಟ್ಟಂತೆ ಸೇನೆಯನು ಸರಿಸಿ,
ಹರಿತಂದು, ಕೈಕಟ್ಟಿ, ಮೊಳಕಾಲನೂರಿ,
ಬಿನ್ನೈಸಿಕೊಳೆ, ನಗುತ, ಪೊಂದೇರನೇರಿ,
ಈಟಿಯಲಿ ಕಾದುವರನಂಬಿನಲಿ ನಾಟಿ
ನಾಡ ನುಂಗಲು ನಡೆದ ಚಕ್ರಿ ದಾಟಿ.

೨.೧

ಆವನವನಾ ಆಳು ತಡೆವವನು? ಆವುದಾ ಪಡೆ ಸೆಣಸಿ ಕೆಡದೆ
ಅಣೆಕಟ್ಟನೊಡ್ಡುವುದು ತಂದು?
ಆ ನುಗ್ಗುನೆರೆಗಿದಿರ್ ನಿಂದು?
ಆವ ಪೆರ್ಗಡಲ್ ಅಗಳು, ಆವ ಮಲೆ ಬಲ್ಗೋಂಟೆ,
ಅದರ ಮುಂಬಾಯ್ವರಿವು ಮೊಗಗೆಟ್ಟು ನಿಲಲು?
ಪರ್ಸದಾ ಪಡೆ ಬಡವೆ? ಅದರೊಡವೆ ಪೆರ್ಜೊಡವೆ?
ಪರ್ಸದೆದೆ ವಜ್ರದೆದೆ, ಅದನರಿಯರಾರು?

೨.೨

ಕಾಳಗವೆ, ಶಾಂತಿ ನಿನಗಿಲ್ಲೆಂದು ಪಾರ್ಸಿಕಂಗಿತ್ತುದಾ ದೈವಂ–
ದಿಟ್ಟತನದಲಿ ಕಳನ ಕೊಯ್ಕೆ,

ಕಟ್ಟಕಡುಹಿನ್ ಪಗೆಯ ಪೊಯ್ಯೆ,
ರಥಗಳಲಿ ಲಟಕಟಿಸಿ, ದುರ್ಗಗಳ ಧೂಳಿಡಿಸಿ,
ಜನಜನವನೇ ಬಡಿದು ಸೆರೆಹಿಡಿದು ತರಲು,
ಬೆಳ್ದೆರೆಗಳುರುಬುತಿರೆ, ಬಿರುಗಾಳಿ ತರುಬುತಿರೆ,
ಹಡಗಿನಲಿ ಬೆಡಗಿನಲಿ ನೋಡಿ ನಗುತಿರಲು!

೩.೧

ಆದೊಡೆಯು, ದೈವ ವಂಚಿಸಲು,
ಬುದ್ಧಿಬಲದಿಂದಾರು ಬದುಕಬಹುದು?
ಒಡ್ಡಿದಾ ಹೆಬ್ಬಲೆಯ ಹಾರಬಹುದು?
ತನ್ನ ಬಿಡುಗಡೆಗೋಡಿ ತೂರಬಹುದು?

೩.೨

ನಗುತ ನಗುತೆಳೆದುಕೊಳ್ಳುವಳು,
ಚೆಲುವುಗಾಣಿಸಿ ರುದ್ರಮಾಯೆಯವಳು :
ಮದಹಿಡಿಸಿ, ಮರುಳ್ಗೊಳಿಸಿ, ಇರುಳುಗವಿಸಿ,
ಮುಚ್ಚುವಳು, ಕಣ್ಣಳಿಸಿ, ಮಣ್ಣೊಳವಳು.

೪.೧

ಅಳುಕು ಬಹುದೇಕೆನಗೆ, ಮತ್ತೆ ಭಯದಿರಿತ?
ಮತ್ತೆ ಮರಳದೊ, ನಮ್ಮ ದಳಕಿಹುದೊ ಮುರಿತ?
ಸೂಸಪುರಿ ಬೆಳಗದೋ, ಪಾಡದೋ ಮತ್ತೆ?
ಹಾಳುಬೀಡೆನಿಪುದೇ ಇನ್ನದಕೆ ಹೊತ್ತ?

೪.೨

ಚೆಲ್ವು ಕಣ್ದೆರೆದಿಟ್ಟ ಕೊರೆದಿಟ್ಟ ಬೀಡು!
ಗೆಲ್ವುದೆಂಬುದು ಹೋಗಿ ಬಡಿವುದೋ ಕೇಡು?
ಅಯ್ಯೊ, ಅಯ್ಯೋ, ಎಂದು ಹೆಂಡಿರೆದೆಚಚ್ಚಿ?
ಕೊಯ್ಯುವರೊ ಬಾಳ್ಗುಡಿಯ ಸಯ್ಪುಮುಡಿ ಬಿಚ್ಚಿ?

೫.೧

ಏಷ್ಯವನು ಯೂರೋಪಿಗೊಂದಿಸಿದ ಸೇತು,
ಪಾರಸಿಕವೀರರಿಗೆ ಹಾ ರಾಹುಕೇತು!
ಹೋದರು–ಹೋದರು–ದಾಟಿ ಶಾವೆಲ್ಲ,
ಕುದುರೆಗಳು, ಕಾಲಾಳು, ತೇರಿನವರೆಲ್ಲ,
ಜೇನೆದ್ದು ಹೋದಂತೆಯೇ, ಕೋಟಿ, ಕೋಟಿ,
ನಮ್ಮನುಳಿದೆಯ್ದಿದರು ದಾಟಿ, ದಾಟಿ.

೫.೨

ಬರಿದಾದ ಹಾಸಿನಲಿ ದುಃಖ ಮಲಗುವುದು :
ಕೊರಗು ಬಯಸುತ್ತ ಸುಖ ದೂರ ತೊಲಗುವುದು.
ಬಾರನೇ, ಬಾರನೇ, ಎಂದು ಮರುಗುತ್ತ,
ವೀರನನು ಬಯಸಿ ತಾನೊಬ್ಬಳೊರಗುತ್ತ,
ನಮೆಯುತ್ತ, ಸಮೆಯುತ್ತ, ಪೆಣ್ ಸೊರಗಿ, ಸೊರಗಿ,
ಇಳಿದಾಯ್ತು ಪರ್ಸವೇ ಕರಗಿ, ಕರಗಿ.
ಓ ಪಾರಸಿಕರೆ, ಕುಳ್ಳಿರಿ ಬನ್ನಿ,

ಮಂತ್ರಶಾಲೆಯಲಿ ಕಾರ್ಯವ ತನ್ನಿ.
ದರ್ಯವುಷನ ಮಗ, ಆರ್ಯೋದ್ಧಾರಿ,
ಶ್ರೀಕ್ಷಯಾರ್ಷನಾ ಶ್ರೇಯವ ಕೋರಿ.
ಗೆಲ್ಲವದಾರಿಗೆ? ಬಿಲ್ಲನು ಬಾಗಿ
ಅಂಬ ಬೀರುವಾ ಜನಕೋ, ತಾಗಿ
ಈಟಿಯಲಿರಿವಾ ಜನಕೋ, ತೂಗಿ
ಹಾಸುಹೊಕ್ಕನು ನೆಯ್ಯುವ ಬನ್ನಿ.
ಅದೆಕೋ, ಬರುವಳು ಹುತೌಶ ತಾಯಿ,
ದೇವರ ಕಣ್ಬೊಳಪಿನ ದೊರೆತಾಯಿ,
ಪಿರಿಯ ದೇವಿ–ಅಡಿಗೆರಗಿ, ಎರಗಿ.

[ಹುತೌಶ, ಕೆಳದಿಯರೊಡನೆ]

ಬಾಳು, ಪೊನ್ನಬಳಸಿನುಡೆಯ ಪರ್ಸದ ತಲೆಪಣ್ಮಣಿ,
ಶ್ರೀಕ್ಷಯಾರ್ಷನುಸಿರಿನುಸಿರು, ದರ್ಯವುಷನ ಕಣ್ಮಣಿ,
ಪಾರಸಿಕರ ದೇವರರಸಿ, ದೇವರೀಗಳಿಹನ ತಾಯ್,
ಕಾಯೆ ಪಳೆಯ ಭಾಗ್ಯದೈವ ಗೆಲುವ ಸಿರಿಯ ಪಡೆಯನು.

ಹುತೌಶ : ಅದೆ ಅಳುಕೇ ತಂದುದೆನ್ನನಿಲ್ಲಿಗೆ, ಓ ಪಿರಿಯರೇ,
ದರ್ಯವುಷನ, ನನ್ನ, ಪೊನ್ನ ಕುಸುರಿವೆಸದ ಸೆಜ್ಜೆಯಿನ್.
ಎದೆಯನಿರಿಯುತಿರ್ಪುದಳುಕು–ತೆರೆದು ಪೇಳ್ವೆ, ಕೆಳೆಯರೇ.
ದೇವನಹುರಸ್ದನೊಸೆಯೆ, ಪಿರಿಯ ಸಿರಿಯನಾಂತನು,
ದೊರೆಗಳ ದೊರೆ, ಚಕ್ರಿಯೆನಿಸಿ ದರ್ಯವುಷನು ಮೆರೆದನು :
ಈಗಳದನು ದುಡುಕುಹೆಮ್ಮೆ ದೂಳ್ಗೊದೆದುದೊ ಅರಿಯೆನು.
ಮತ್ತೆ ಮತ್ತೆ ನೆನೆವೆನಿದನು–ಪಿರಿಯರ ನುಡಿ ಪುಸಿಯದು–
ಬಾಳದು ಆಳಿಲ್ಲದ ಸಿರಿ, ಸಿರಿಯಿಲ್ಲದ ಮನೆಯದು.
ಸಿರಿಯೊ ನಮಗೆ ತುಂಬಿರುವುದು: ಆಳ ಕಾಣೆ ಕಾಯಲು.
ಅರಮನೆಯೊಳ್ ಮುತ್ತಬ್ಬೆಯ ಕಣ್ಣ ಬೆಳಕು ಕಾಣನು.
ಕೇಳ್ದಿರಿ, ಎನ್ನಳಲನೆಲ, ಮುತ್ತ ನಚ್ಚಿನರಿದರೇ,
ಪೇಳಿ ಎನಗೆ, ಮಾಳ್ಪುದೇನು, ಪಾರಸಿಕರ ಪಿರಿಯರೇ.

ಮೇಳ : ತಾಯೆ, ಪಿರಿಯ ನಾಡಿನೊಡತಿ, ನಂಬಿ, ತಮ್ಮ ತೊತ್ತಿರು.
ನುಡಿಯೊ, ನಡೆಯೊ, ಮಾಡಬಲ್ಲುದೇನು ಬೆಸಸಿ, ಮಾಳ್ಪೆವು.

ಹುತೌಶ : ಆ ಯವನರನ್ ಮುರಿದು, ಅವರೂರ್ಗಳನ್ ಕೊಳಲ್
ಪಡೆನೆರಪಿ ತಾನತ್ತ ಪೋಗೆ ಮಗನ್, ಎನಗಿತ್ತ
ತಪ್ಪದೆಯೆ ಇರುಳಿರುಳ್ ಸುಳಿಯುವುವು ಕನಸುಗಳ್.
ನಿನ್ನೆಯದು ಚೆನ್ನಾಗಿ ಕಾಣಿಸಿತು. ಹೆಣ್‌ಮಕ್ಕ–
ಳಿಬ್ಬರೆನ್ನಿದಿರಿನಲಿ : ಹೊಳೆಹೊಳೆವ ತೊಡಿಗೆಗಳು :
ಪಾರಸಿಕರುಡಿಗೆ ತಾನೊಬ್ಬಳಿಗೆ : ಡೋರಿಕರ–
ದೊಬ್ಬಳಿಗೆ : ಇಬ್ಬರೂ ಹುದುವಲ್ಲದಾಕಾರ,
ಎತ್ತರದ ಗಾಂಭೀರ್ಯ : ಕಣ್ಸೆಳೆವ ಚೆಲುವೆಯರು,
ಒಂದೆ ಕುಲದಲಿ ಹುಟ್ಟಿ ಬೆಳೆದವರು. ಹೆಲಸಿನಲಿ
ಬಾಳ್ವಳೊಬ್ಬಳು : ಒಬ್ಬಳೇಷಿಯದ ಪರಪಿನೀ
ಭೂಮಿಯಲಿ. ಕನಸಿನೊಳ್ ನೋಡುತಿರೆ, ಕಲಹವಾ–
ಯ್ತವರೊಳಗೆ : ನನ್ನ ಮಗನದ ಕಂಡು, ಪಿಡಿದವರ–

ನೆಳೆತಂದು, ಪಳಗಿಸಲು ತನ್ನ ರಥದಲಿ ಹೂಡಿ,
ಕೊರಳಿನಲಿ ನೊಗವನಿಟ್ಟೇರಿದನು :–ಒಬ್ಬಳೋ,
ಹಲ್ಲಣದ ಹೆಮ್ಮೆಯೊಳ್ ಕುಣಿದಾಡಿ ಹಿಗ್ಗಿದಳು :
ಜಗ್ಗಿದಳು ಮತ್ತೊಬ್ಬಳೊದೆದಾಡಿ : ಕಡಿದು ಕಡಿ–
ವಾಣವನ್, ಮುರಿದು ಮೂಕಿಯನ್, ಒದರಿ, ನೊಗವನೊ–
ಕ್ಕಡೆಗೊಗೆದು, ಚಿಮ್ಮಿದಳು. ಉರುಳಿದನು ನೆಲಕಾಗ
ನನ್ನ ಮಗ. ಒಡನೆ ಕನಿಕರಗೊಂಡು ಮೆಯ್ದೋರೆ
ದರ್‍ಯವುಷನ್, ಎನ್ನವನು ಕಾಣ್ಗೊಂಡು ಮೇಲುಡುಪ
ಸೀಳಿದನು ಶ್ರೀಕ್ಷಯಾರ್ಷನ್ ಪಿಡಿದು ಪರಿಪರಿದು.
ಇರುಳ ದರ್ಶನವಿಂತು; ಬೆಳಗಾಗ, ಉತ್ಪಾತ–
ವಿನ್ನೊಂದು : ಕೈತೊಳೆದು, ದೇವಕುಲಕೈತಂದು,
ವಿಘ್ನಶಾಂತಿಯ ಬೇಳ್ದು ಮಧುಪರ್ಕಧೂಪಗಳ
ನೀಡುತಿರೆ, ಅಕ್ಕಟಾ, ಗರುಡನೊಂದೊದರುತ್ತ
ಮಿಥ್ರದೇವನ ವೇದಿಯೊಳ್ ಬಂದು ಬಿದ್ದತ್ತು :
ಅಟ್ಟಿ ಬಂದುದು ಹಿಂದೆ ಸಿಡಿಲವೊಲು ಕಿರುಗಿಡುಗ :
ಪಕ್ಕಿಯರಸನ ಕುಕ್ಕಿ, ಗರಿ ಕಿತ್ತು, ನಡುಗಿಸಿತು.
ಕಂಡು ನಾನಂಜಿದೆನು. ಕೇಳಿ ನೀವಂಜಿದಿರಿ.
ಓ ಎನ್ನ ಕೆಳೆಯರೇ, ಪರ್ಸದೆ ನಿರಂಕುಶನ್
ನಿಮ್ಮ ಬಲದಿಂದರಸು. ಗೆದ್ದು ಬರೆ, ನಲಿವೆವು.
ಬೇರೆ ಎಣಿಸಿದೊಡೆ ವಿಧಿ, ಮರಳ್ದುದಕೆ ನಲಿವೆವು.
ಅವನಾರ್ಗೆ ಹೊಣೆ ಇಲ್ಲಿ? ಪೇಳಿ, ಓ ಪಿರಿಯರೇ.
ಮೇಳ: ನಾವು ಪೇಳ್ವುದಿನಿತೆ, ತಾಯೆ–ಬೇಡ ಹೆಚ್ಚು ಹೆದರಿಕೆ :
ಹೆಚ್ಚು ನೆಚ್ಚಿಕೆಯೂ ಬೇಡ : ಪೋಗು ಬೇಡು ದೇವರನ್–
ಕೇಡ ಕೆಡಿಸಿ, ಒಳ್ಪನಿತ್ತು, ತಾವು, ತಮ್ಮ ಮಕ್ಕಳು,
ತಮ್ಮ ಬಳಗ, ಕೆಳೆಯರೆಲ್ಲ, ಸಿರಿಯ ನಾಡ ಪ್ರಜೆಗಳೆಲ್ಲ,
ಹೆಚ್ಚುವ ಪರಿ ಮಾಡಲೆಂದು ಶ್ರದ್ಧೆಯಿಟ್ಟು ಬೇಡುವ.
ಭೂಮಿತಾಯ್ಗೆ, ಪಿತೃಗಳಿಗೆ, ತರ್ಪಣಗಳನೆರೆಯುವ.
ಇರುಳು ಕಣ್ಗೆ ಕಂಡ ದೇವ ದರ್‍ಯವುಷನ ಕರೆಯುವ.
ತಮಗೆ, ಶ್ರೀಕ್ಷಯಾರ್ಷನಿಗೆ, ಮಂಗಳವನು ಕಳುಹಲಿ!
ಬರುವಮಂಗಳವನು ಮೆಟ್ಟಿ ಕೀಳುಲೋಕಕಿಳುಹಲಿ!
ಭಕ್ತರಾವು ತಮ್ಮ ಮನೆಗೆ, ಭಕ್ತಿಯಿಂದ ನುಡಿವೆವು–
ರಾಜನೊಳ್ಳಿತಕ್ಕೆ ಸ್ವಪ್ನಫಲವದೆಲ್ಲ ತಿರುಗಲಿ!
ಹುತೌಶ: ಒಳ್‌ಬಗೆಯೊಳು, ಮಗನ, ನನ್ನ, ಮನೆಯ, ಹರಸಿ ನುಡಿದಿರಿ.
ನಿಮ್ಮ ಪುರುಳು ನಡೆಯಲಣ್ಣ. ಹರಕೆಯಿಡಲು ತೆರಳುವೆ,
ತಣಿದು ದೇವತೆಗಳು, ಪಿತೃಗಳೆಮ್ಮ ಪೊರೆದು ತಣಿಸಲಿ.–
ಒಂದು ಮಾತು, ಓ ಕೆಳೆಯರೆ : ಎತ್ತಲಿಹುದು ನೆಲದಲಿ,
ಆ ಪೆಸರಿನ, ಆ ಪೆರ್ಚಿನ ಅಥೆನಪುರಿ ತಾನದು?
ಮೇಳ: ದೂರ, ನಮ್ಮ ಮಿಥ್ರದೇವ ಮುಳುಗಿ ಪೋಪ ಕಡೆಯಲಿ.
ಹುತೌಶ: ಏಕೆ ಮಗನ್ ಅಥೆನ್ಸಪುರವ ಗೆಲ್ಲ ಬಯಸಿ ಪೋದನು?
ಮೇಳ: ಅದೊಂದ ಗೆಲೆ, ಎಲ್ಲ ಹೆಲಸ್ ದೊರೆಯಡಿಯೊಳ್ ಬೀಳ್ವುದು.
ಹುತೌಶ: ಏನು, ಆಥೆನ್ಸ್ ಅನಿಬರಾಳ ಪಿರಿಯ ಪಡೆಯನುಳ್ಳುದೆ?

ಮೇಳ: ಸಾಕು–ಪಾರಸಿಕರು ಮುನ್ನ ಅದರ ಕೆಚ್ಚನರಿಯೆವೆ?
ಹುತೌಶ : ಆಳ್ಗಳಿರಲಿ, ಸಿರಿ ಇಹುದೋ? ನಮ್ಮ ಸಿರಿಗೆ ಸರಿಯದೊ?
ಮೇಳ: ಬೆಳ್ಳಿಹೊನಲ ಬಸಿರಿನಿಂದ ಭೂಮಿಯೆ ತಾನ್ ಸುರಿವಳು.
ಹುತೌಶ: ಅಂಬನೆಸೆದು ನಾಟಬಲ್ಲ ಬಿಲ್ಲ ಕೊಬ್ಬೊ ಅವರದು?
ಮೇಳ: ಇಲ್ಲ, ತಾಯಿ. ನಾಟುವೀಟಿ, ಹೊತ್ತ ಹರಿಗೆ, ಕಟ್ಟಣಿ.
ಹುತೌಶ : ಆ ಹಿಂಡಿಗೆ ಕುರುಬನಾರು? ಒಡೆಯ? ಆಳ್ವ ಪೆರ್ದೊರೆ?
ಮೇಳ: ದೊರೆಗೆ ಆಳ್ಗಳಲ್ಲ ಅವರು, ತಮ್ಮ ತಾವೆ ಆಳ್ವರು.
ಹುತೌಶ : ಒಡೆಯರಾಳ್ವ ಪಡೆಯನವರದೆಂತು ತಡೆಯಲಾಪರು?
ಮೇಳ: ದರ್‍ಯವುಷನೆ ಬಲ್ಲನದನು–ಪಿರಿಯ ಪಡೆ! ಸಿರಿಯ ಪಡೆ!
ಹುತೌಶ : ಆ ಪಡೆಯನು ಪೆತ್ತವರನು ತಣಿಸುವ ನುಡಿಯಲ್ಲಿದು.
ಮೇಳ: ಎಲ್ಲವೀಗ ತಿಳಿದುಬಹುದು–ಇತ್ತಲೋಡಿ ಬರುವನು
ಪಾರಸಿಕರ ದೂತನೊಬ್ಬ : ಒಳ್ಳೆ, ಕೆಡುಕೊ ಕೇಳ್ವೆವು.

[ದೂತ]

ದೂತ: ಏಷಿಯದ ಸಾಮ್ರಾಜ್ಯಕೇಂದ್ರವೇ! ಓ ಪರ್‍ಸ!
ಐಶ್ವರ್‍ಯಭೂಮಿಯೇ, ಪೋರಾಳ ತಾಯ್ತವರೆ!
ಆವ ಪೆರ್ಮೆಯ ಕೋಡಿನಿಂದುರುಳಿ ಒಂದೇಟಿ–
ಗೆಲ್ಲಿ ಬಿದ್ದೆ! ಪರ್‍ಸದಾ ಪೂವೆಲ್ಲ ಪೋಯಿತೇ!
ಅಯ್ಯೋ! ಕೆಟ್ಟವನು ತಾನೆ ಮೊದಲೇ, ತರಲು
ಈ ಕೆಟ್ಟ ಸುದ್ದಿಯನು! ದಿಟವನಾಡಲೆ ಬೇಕು–
ದು:ಖ, ಪಾರಸಿಕರೇ, ಅಳಿಯಿತ್ತು ಪಡೆಯೆಲ್ಲ.
ಮೇಳ: ಅಕಟಕಟಾ! ಅಕಟಕಟಾ! ಅಳಿಯಿತ್ತೇ, ಅಳಿಯಿತ್ತೇ!
ಅಳಿ! ಪಾರಸಿಕರೆ, ಅಳಿ! ಕಣ್ಣೀರ ಸುರಿಸಿ!
ದೂತ: ಎಲ್ಲವೂ ಮುಳುಗಿತ್ತು! ಎಲ್ಲವೂ ತೊಡೆಯಿತ್ತು!
ಪಾತಾಳಕಾಯ್ತು, ಓ ಪಾರಸಿಕರೇ!
ಮೇಳ: ಇದ ಕೇಳೆ ಬದುಕಿದೆವೇ! ನೀಳ್ಮುಪ್ಪನೆಯ್ದಿದೆವೇ!
ಅಳಿ, ಪಾರಸಿಕರೆ, ಅಳಿ! ಕಣ್ಣೀರ ಸುರಿಸಿ!
ದೂತ: ಕಿವಿಯಿಂದ ಕೇಳ್ದುದಲ್ಲ! ಕಣ್ಣಾರ ಕಂಡೆನಲ್ಲ,
ಈ ಕೆಟ್ಟ ಕೇಡ, ಓ ಪಾರಸಿಕರೇ!
ಮೇಳ : ಅಕಟಕಟಾ, ಇದಕಾಗಿಯೆ ನಡೆಯಿತ್ತೇ, ನಡೆಯಿತ್ತೇ,
ಪಲತೆರದ ಪರ್‍ಸಪಡೆ ಹೆಲಸಿಗೆತ್ತಿ!
ದೂತ : ಸಲಮಿಸಿನ ಕರೆಗಳುಂ, ಕೆಲಬಲದ ತೆರೆಗಳುಂ,
ಕಿಕ್ಕಿರಿದು ಹೆಣಗಳಿನ್ ಕೊಚ್ಚುತಿಹುವು.
ಮೇಳ: ಅಕಟಕಟ! ತೆರೆಯೆಸೆಯೆ, ಒಲಿದವರ ಕೈಕಾಲು
ಅರೆಯಿಂದ ಬಡಿದರೆಗೆ ಮುರಿಯುತಿಹುವು.
ದೂತ : ಬಿಲ್ಲಂಬು ಬೀಳಾಯ್ತು; ತೇರ್ ಕುದುರೆ ಕಾಳಾಯ್ತು.
ಪಡಗು ಪಡಗಿನ್ ನೆಗ್ಗಿ ಪುಡಿಯಾದುವು.
ಮೇಳ: ಪಾರಸಿಕರಾರಂಭ, ಸಾಮ್ರಾಜ್ಯಸಂರಂಭ,
ಶಕ್ತಿ ಭುಕ್ತಿಗಳೆಲ್ಲ ಭಂಗವಾಯ್ತೇ!
ಸುಖ ದುಃಖವಾಯ್ತೇ, ಪೊಡಪು ಪುಡಿಯಾಯ್ತೇ,
ಪಾಡೆಲ್ಲ ಗೋಳಾಟವಾಯ್ತೇ!
ದೂತ: ಆಗ ಆ ಮರಥಾನ್–ಈಗ ಈ ಸಲಮಿಸ್,

ಹೇಳದಿರು ಆ ಹೆಸರ, ಅಳಲ ಆಥೆನ್ಸ್.
ಮೇಳ: ಆಥೆನ್ಸಿನಾರಂಭ, ಸಾಮ್ರಾಜ್ಯಸಂರಂಭ,
ಶಕ್ತಿ ಭುಕ್ತಿಗಳೆಲ್ಲ ಅವರಿಗಾಯ್ತೇ!
ದುಃಖ ಸುಖವಾಯ್ತೇ, ಪಗೆಯೆ ಮುಡಿಯಾಯ್ತೇ,
ಗೋಳೆಲ್ಲ ಪಾಡಾಟವಾಯ್ತೇ!
ಹುತೌಶ : ಸಾಕು ಸಾಕೀ ಅಳಲು–ಈ ಪರಿಯ ಕೇಡಿಂಗೆ
ಮಾತು ಹೊಮ್ಮದೆ ಬಿಗುತು ಮೂಗಿಯಾದೆನು ನಾನು.
ದೇವರ್ಕಳೆಡರ ಕೊಡೆ, ಹೊರಬೇಕು ತಾಳ್ಮೆಯಲಿ
ಮರ್ತ್ಯರಾದವರು.–ಎಲೆ ದೂತ, ಶಾಂತನಾಗು :
ಪಾಳಿಯಲಿ ತೆರೆದೆಮಗೆ–ನಿನಗೆ ನೆನಪಿಂದಳಲು
ಮತ್ತೊಮ್ಮೆ ನೆರೆಯುಕ್ಕಿಬಂದೊಡೆಯು–ಮೊದಲಿಂದ
ಕಡೆವರೆಗೆ ಪೇಳ್, ಆರು ಸಾಯದವರ್? ಉಳಿಯದವ–
ರಾರಾರು? ಪೊಂಗೋಲ ಪಿಡಿದವರೊಳಾರಾರ್ಗೆ
ನಮ್ಮಳ್ಕೆ? ಪಡೆಯ ತಲೆ ತಣ್ಣಗಾದವರೆನಿತು?
ದೂತ: ಶ್ರೀಕ್ಷಯಾರ್ಷನ್ ಬದುಕಿ ಸೂರ್ಯದೇವನ ಬೆಳಕ ನೋಡುತಿಹನಿನ್ನುಂ.
ಹುತೌಶ : ಪಿರಿಯ ಬೆಳಕಿದು ನನಗೆ, ಅರಮನೆಗೆ, ಕಾರಿರುಳಿನಲ್ಲಿ ಬೆಳ್ವೆಳಗು.
ದೂತ: ಪತ್ತು ಸಾವಿರ ಕುದುರೆಗೊಡೆಯನ್ ಅರ್ತಂಬರೀಸ್ ಸಲಮಿಸಿನ ಕಡಿಯ
ಕರೆ ತಾಗಿ ಕೊನೆಗಂಡನ್. ಅವನ ದಳವಾಯ್ ದಧಕಿಸ್ ಎದೆಗೀಟಿ
ನೆಟ್ಟು ಪಡಗಿಂದ ನೆಗೆದಾಲಿ ಮುಳುಗಿದನ್. ಬ್ಯಾಕ್ಟ್ರಿಯರ ಶ್ರೇಷ್ಠನಾ ಟೆನೆಗೋನ್,
ಕಡಲ್ಪೊಯ್ವ ಆ ಅಯಸ ಕುರುವಮನ್ ಬಳಸುತ್ತ ತೇಲಾಡುತಿರ್ಪನ್.
ಲೀಲಿಯಸ್, ಆರ್ಸಮಿಾಸ್, ಆರ್ಗೆಸ್ಟೀಸ್–ಈ ಮೂವರುಂ ಪಾರಿವಾಳಂ
ಹಾರಾಡುವಾ ದೀವಿಬಂಡೆಗಳ ಬಡಿಯುತ್ತ ತೆರೆಗೆ ಮತ್ತಿಳಿವರ್.
ಮೂವತ್ತು ಸಾವಿರದ ಕಪ್ಪು ಕುದುರೆಯ ತಂದ ಈಥಿಯೊಪರರಸು.
ಮಟ್ಟಲಸ್, ಕೆನ್ನೀರ ಕಾರುತ್ತ ಕಪ್ಪುಗಡ್ಡವ ತೊಯಿಸಿ ಬಿದ್ದನ್.
ಮಗರ ಅರಬಸ್ ಮತ್ತೆ ಬ್ಯಾಕ್ಟ್ರಿಯರ ಅರ್ತಮಿಾಸ್ ಆ ಕರೆಯ ಮಣ್ಣ
ಮುಡಿಗಚ್ಚಿ ಸತ್ತೊಡಂ ಬಿಡೆವೆಂದು ಕಾದಿರ್ಪರ್. ಅಲ್ಲಿ ಆಮಿಸ್ತ್ರೀಸ್,
ಅಲ್ಲಿ ಅಂಫಿಸ್ತ್ರಿಯೊಸ್, ಅಲ್ಲಿ ಮಿತ್ರೋಘತೀಸ್, ಪೆಂಡಿರನು ಬಿಟ್ಟು
ಮುಳ್ನೆಲದೆ ಪವಡಿಸಿದರ್. ಅರಿಯೊಮರ್ದಸ್, ಥರುಬಿಸ್, ಸ್ಯೂಯೆ–
ನೀಸ್, ಅಕಟ,
ಪಗೆವರನ್ ಪೊಯ್ದು ಪೊಯ್ದುರುಳಿದರ್, ತೇರ್ ಮುರಿದು, ಪಡಗೊಡೆದು :
ಕಡೆಗೆ,
ಪತ್ತು ಪಗೆಯನ್ ಕೊಳದೆ ಒರ್ವನುಂ ಬೀಳನ್! ಒರ್ವನುಂ ಸಾಯನ್
ಪೆಸರ ನೆನಪನ್ ನಮಗೆ ಬಿಡದೆ ನೆನೆಯುತ್ತಿರಲ್! ತಲೆಯಾಳ್ಗಳಿವರು :
ಎಣಿಸಲ್ಕೆ ಮಿಕ್ಕವರ್ ಮಿಕ್ಕವರ್.
ಹುತೌಶ: ಸಾಲದೇ ಮರುಗಲ್ಕೆ ಇವರೇ?
ಸುಖದ ಕಥೆಯೇ ಕೇಳೆ ಮುಂದೆಯುಂ? ನಾಚಿಕೆ, ಪರ್ಸಕ್ಕೆ, ಕೊರಗು.
ಆದೊಡೆಯು, ಪೇಳು, ಪೇಳೆಲ್ಲವನ್ ಕೇಳುವಂ. ಹಲನರಾ ನಾವೆ
ಮುಂಬುಮುಂಬಿಂಗೆನಿತು ಸಂಖ್ಯೆಯಲಿ ಮುಂದಣ್ಮಿ ನೂಂಕಿದುದಿದಿರ್ಚಿ
ಪಾರಸಿಕನಾವೆಗಳ ಹಳಚಿ?
ದೂತ: ಸಂಖ್ಯೆಯಲಿ ಗೆಲ್ಲುವೊಡೆ, ಓ ತಾಯ್,
ನಮ್ಮದೇ ಗೆಲ್ಲಂ! ಹೆಲನರಿಗೆ ಮುನ್ನೂರು ಹಡಗುಗಳು, ಹತ್ತು

ಅದರೊಳಗೆ ಬಲುವೇಗ, ಒಂದು ನೂರರ ನೂರು ಶ್ರೀಕ್ಷಯಾರ್ಷ್ವಂಗೆ,
ಕಡುವೇಗ ಇನ್ನೂರು ಹಾಯಿಗಳು, ಮೇಲೇಳು. ಸಾಲದೇ, ನೋಡು,
ಕಾಳಗಕೆ ಈ ಮೊತ್ತ? ಆಳ್ ಮಾಳ್ಪುದೆಲ್ಲವುಂ ಮಾಡಿದೆವು. ದೈವಂ
ಕೆಡಿಸಿದುದು ಸರಿಯಾಗಿ ತೂಗದೆಯೆ ತೋಲೆಯನ್. ಪಲ್ಲಸ್ ಅಥೀನೆ
ಕಾಪಾಡಿದಳ್ ತನ್ನ ಪೊಳಲನ್.
ಹುತೌಶ: ಕಾಪಾಡಿದಳೆ ತನ್ನ ಪೊಳಲನ್?
ಉರಿಯುಂಡುದಲ್ಲವೇ ಕೋಟೆಗಳನ್? ಊರೆ ಹಾಳಲ್ಲವೇ ಆಥೆನ್ಸ್?
ದೂತ: ಅಥಿನಿಯನರಿರುವನ್ನ ಬಾಳುವುದು ಆ ಊರ್. ಊರ್‌ಕೋಟೆ ಆಳ್ಗಳ್.
ಹುತೌಶ: ಆರ್ ಮೊದಲ್ ತೊಡಗಿದರು ನಾವೆಗಳ ಯುದ್ಧವನ್, ಹೆಲನರೋ, ಮೇಣು,
ಹೆಬ್ಬಲದ ಹಮ್ಮಿನಲಿ ಸಡಗರಿಸಿ, ಕೈಬೀಸಿದನೊ ನಮ್ಮ ಮಗನು?
ದೂತ: ಆವುದೋ ಮತ್ಸರದ ದೇವತೆ, ಓ ರಾಣಿ, ಆ ಕಿಚ್ಚ ಮೊದಲು ಮೂಡಿದುದು.
ಆಥಿನಿಯನರೋಡಂಗಳಿಂದಾರೊ ಶ್ರೀಕ್ಷಯಾರ್ಷ್ವನ ಬಳಿಗೆ ಬಂದು,
"ಮಬ್ಬುಮುಸುಕಿರುಳಿಳಿಯೆ, ಹೆಲನರೊರ್ವರುಮಿರರು, ತಂತಮಗೆ ತಾವು,
ಹೇಡಿಗಳು, ಹುಟ್ಟುಬಗಿಯುತ್ತೋಡಿ ಗುಟ್ಟಿನಲಿ ಬದುಕಿಕೊಳ್ಳುವರು"
ಎಂದೊಡದ ತಾ ನಂಬಿ, ಅರಿಯದಾ ಹೂಟವನು, ಕರುಬುದೈವವನು,
ನಾವೆಯೊಡೆಯರ ಕರಸಿ ಬೆಸಸಿದನ್–"ಈ ನೇಸರಿಳೆಯಿಂದ ತೆಗೆದು
ಬಿಸುಗದಿರನ್, ಅಂಧಕಾರಂ ಕವಿಯೆ ಬಾನ್‌ಗುಡಿಯ ಪೌಳಿಗಳನೆಲ್ಲ,
ಮೂರು ಸಾಲಲಿ ನಿಲಿಸಿ ಹಡಗುಗಳ, ಆ ಕಳಿಯ ಬಾಯ್ಗಳನು ಮುಚ್ಚಿ
ಆಯಸ ಕುರುವದ ಸುತ್ತ ಬಳಸುತ ಕಲಂಗಳನ್ ಕಾವಲಿಹುದೆಲ್ಲ.
ಕಳ್ಳದಾರಿಯ ದೂರಿ, ಒಂದು ಹೆಲನರ ದೋಣಿ ತಲೆ ತಪ್ಪಿ ನುಸುಳೆ,
ಓರೊರ್ವರುಂ ನಿಮ್ಮ ತಲೆ ದಂಡ, ಎಚ್ಚರಿಕೆ!" ಇಂತು ದೊರೆ ಹಿಗ್ಗಿ,
ಮುಂದಪ್ಪುದನು ಕಾಣ, ದೇವರ್ಕಳೊಳಗೆಯೇ ನೆಯ್ಯುವುದ ಕಾಣ,
ಕಟ್ಟಾಣೆಯಿಟ್ಟನ್. ಬೆಸಕಯ್ದು ಪಡೆವಳರುಮಂಬಿಗರುಮುಂಡು,
ಹುಟ್ಟುಗಳ ಕಟ್ಟಿ ಅಣಿಯಾದರ್. ನೇಸರಿನ ಬೆಳಕಿಳಿದು ಕಾರಿರುಳ್ ಮುಸುಕೆ,
ಅಂಬಿಗರು, ನಾಯಕರು ತಮ್ಮತಮ್ಮೆಡೆಗಿದ್ದು ಕೂಗಿದರು, ಸಾಲು–ಸಾಲಾಗಿ
ಓಡುಗಳ ನಿಲಿಸಿದರು, ಇರುಳೆಲ್ಲ ನಡಸಿದರು, ಬಳಸಿದರು ಕಳಿಯ
ಸರಪಣಿಯನೆಳೆದಂತೆ:–ಕದ್ದೋಡುವನು ಹೆಲನನೊಬ್ಬನಿಲ್ಲ!
ಬೆಳ್‌ಗುದುರೆ ಹಗಲು ಕಡೆಗೆದ್ದುಬಂದಿಳೆಯೆಲ್ಲ ಚೆಲ್ವಿನಲಿ ಬೆಳಗೆ,
ಹೆಲನರಿನ್ ಮೊದಲೆದ್ದುದೊಂದಾರ್ಪು–ಬಲ್ಲುಲಿಯ, ನಲ್ಲುಲಿಯ ಪಾಡು,
ದೀವಿಕರೆಯರೆಗಳಿನ್ ಮೊಳಗೆ ಮಾರುಲಿಗಳ್. ಬೆದರಿ, ಎದೆಗುಂದಿ,
ಪೆಚ್ಚಾದರೆಮ್ಮವರು ಕೇಳ್ದೊಡನೆ! ಓಡುವವರಂತಲ್ಲ, ಗಂಭೀರ ಘೋಷಂ
ತೆರೆತೆರೆಯೊಳುಣ್ಮಿತ್ತು ಹೆಲನರಾ ಪೀಯನ್, ಜಯಕೆ ಮುಂದಾಗಿ
ತುಡುಕುತಿರ್ಪವರಂತೆ! ಉರಿದತ್ತು ಅತ್ತಕಡೆ ಎತ್ತಲುಂ ಕಹಳೆ!
ಒಮ್ಮನದೊಳದ್ದಿದುವು ಹುಟ್ಟುಗಳು, ಉಪ್ಪುನೀರ್ ತುಳ್ಕಿ ತಳ್ಪೊಯ್ಯೆ,
ಬಲಗೋಳು ಮುಂದಾಗಿ ನೂಂಕಿದುದು ನಾವೆಬಲಮೆಲ್ಲ, ಒಗ್ಗಿನಲಿ.
ಕೇಳಸಿತು ಮೇಗೊಗೆದು ಕೂಗೆಂದು– "ಓ ಹೆಲನ ಮಕ್ಕಳಿರ, ನುಗ್ಗಿ:
ಬಿಡಿಸಿಕೊಳಿ ತಾಯ್ನಾಡ ಹೋರಾಡಿ, ಬಿಡಿಸಿಕೊಳಿ ಹೋರಾಡಿ ನಿಮ್ಮ

ಮಕ್ಕಳನು, ಹೆಂಡಿರನು, ಹೆತ್ತವರ ದೇವರಾ ಗುಡಿಗಳನು, ಸತ್ತಾ
ಹಿರಿಯರನು ಹುದಿದಿಟ್ಟ ಗುಳಿಗಳನು– ಎಲ್ಲಕ್ಕೂ ಈಗ ಹೋರಾಟ!
ಅದಕೆದಿರ್, ಪಾರಸಿಕ ಭಾಷೆಯಲ್ಲಿ ಮೊಳಗಿದೆವು ಕಡಲ್‌ಮೊರೆತದಂತೆ
ಮಾರುಲುಹ. ಹೊತ್ತು ಬಂದುದು: ತಡೆವುದಿನ್ನೇಕೆ! ಹಡಗೊಡನೆ
ಹಡಗು
ಹಿತ್ತಳೆಯ ಮೂತಿ ಮೂತಿಗಳಮರಿ ತೊಡರಿದುವು: ಹೆಲನರದು ಕೊಕ್ಕು
ಮುಂಬೊಕ್ಕು, ಫಿನಿಷಿಯರ ಕಪ್ಪಲಿಂದೆಗರಿಸಿತು ಮುಂಬು ಬೊಂಬೆಯನು.
ಹೆಣೆಹೆಣೆದು ಹೆಣಗಿದುವು ಪಡೆಯೆರಡು, ಹಡುಗುಹಡಗೇ ಈಟಿಯಾಗಿ:
ಮೊದಮೊದಲು ಪಾರಸಿಕ ನಾವೆಗಳು ತಂಡತಂಡದಿ ತೆಕ್ಕೆಗೊಂಡು
ಕಾದಿದುವು, ಗೆಲಗೊಡದೆ. ಅದೊಡಿಕ್ಕಟ್ಟಿನಲಿ ತೊಡಕಿ, ತೊಡರುತ್ತ,
ಹುಟ್ಟುಹುಟ್ಟನು ಬಡಿದು ಮುರಿಯುತ್ತ, ಹಿತ್ತಳೆಯ ಮೂತಿ ಮೂತಿಯನು
ತಿವಿದು ತಿವಿದೊಡೆಯುತ್ತ, ಹಡಗೊಂದನೊಂದು ತಾಕಾಡುತ್ತ, ನಾವೆ
ಕಂಗೆಟ್ಟುದನು ಕಂಡು, ಹೆಲನಿಕರು ಜಾಣ್ಮೆಯಲಿ ಸುತ್ತಲುಂ ಬಳಸಿ
ಒತ್ತೊತ್ತಿ ಚುಚ್ಚಿದರು: ಹಡಗು ತಲೆಕೆಳಕಾಯ್ತು: ಕಡಲು ಮರೆಯಾಯ್ತು,
ಚೆದರಿದ್ದ ಹಲಗೆಮುರುಕುಗಳಿಂದ, ತೇಲುಹೆಣದೊಡ್ಡಿಂದ, ಮುಚ್ಚಿ:
ಕರೆ, ಚಾಚುಬಂಡೆಗಳು, ಕೋಡುಗಳು ತೀವಿದುವು ಹೆಣದೊಟ್ಟಲಿಂದ.
ಏಷಿಯದ ನಾವೆಗಳು, ಉಳಿದುಕೊಂಡುವು, ಚೆಲ್ಲಿ, ದಿಕ್ಕುಪಾಲಾಗಿ,
ಒಡ್ಡುಗೆಟ್ಟೋಡಿದವು. ಬಲೆಯೊಳಗೆ ಮೀನ್‌ಬಿಡಿದರಂತೆ, ಹಗೆಯವರು
ಹುಟ್ಟುಮುರುಕುಗಳಿಂದ, ಹಲಗೆಸೀಳುಗಳಿಂದ ಬಿದ್ದವರ ಬಡಿದು,
ಕಡಿಕಡಿದು ಕೊಲ್ಲುತಿರೆ, ಮೊಳಗಿದುದು ಆ ಬಳಿಯ ಮುನ್ನೀರ ಹರಹು,
ಸಾಯುವರ ಚೀರಾಟ, ಗೆದ್ದವರ ಸಿಂಹನಾದಂಗಳಿಡಿತುಂಬಿ,
ಇರುಳ್ ಮುಚ್ಚುವನ್ನೆಗಂ ಕಾಳಗದ ಕಳನನ್. ಕರೆಯಿಲ್ಲ ಕೇಡು–
ಪರಿವಿಡಿದು ಪೇಳುವೊಡೆ ಸಾಲದು ಪಗಲ್‌ಪತ್ತು: ಕೇಳಿನಿತು ಸಾಕು,
ಅನಿತೊಂದು ಜನಮೆಂದುಮಿದುವರೆಗೆ ಸತ್ತುದನ್ ಕಾಣನಾ ಸೂರ್ಯನ್.
ಹುತೌಶ: ಓವೊ! ಕೇಡಿನ ಕಡಲ್ ತೂಳ್ದುದೇ ಪರ್ಸವನ್, ಪಾರಸಿಕ ಪೆಸರನ್!
ದೂತ: ಇನ್ನುಮಿರ್ಪುದು ಕೇಳು–ಕತೆಯೊಳರೆ ಮುಗಿದಿಲ್ಲ–ಇಮ್ಮಡಿಯ ದುಃಖ.
ಹುತೌಶ: ಇನ್ನುಮಿರ್ಪುದೆ ಕೇಳ್ವ ಸೌಭಾಗ್ಯ? ಅದೆಂತಹುದೊ ಇದಕೆ ಮೀರಿದುದು
ದೂತ: ಪಾರಸಿಕರುತ್ತಮರದಾರಾರು, ಜಾತಿಯಲಿ ಶೌರ್ಯದಲಿ ತಲೆಮೆ
ತಾವಾರು, ರಾಜಂಗೆ ಬಳಿಸೇವೆಗೆಯ್ವರೊಳು ನಚ್ಚಿನವರಾರು,
ಆ ಅರಸುಮಕ್ಕಳೆಲ್ಲರುಮಳಿದರಳಿಸಾವನ್–ಅಳಿವೆಸರನುಳಿಸಿ.

ಹುತೌಶ: ಕೆಳೆಯರೇ, ಈ ಕೆಟ್ಟ ಕೇಡುಮನ್ ಕೇಳಲ್ಕೆ ಬಾಳ್ದೆನೇ, ಪಾಪಿ!
ಅವ ಸಾವನ್ ಸತ್ತರ್ ಆ ನಮ್ಮ ನಚ್ಚುಗೆಯ ಪರ್ಸದ ಕುಮಾರರ್?
ದೂತ: ಗಡ್ಡೆ ಇರ್ಪುದು, ಕಿರಿದು, ಸಲಮಿಸಿನ ಮುಂದುಗಡೆ, ನಾವೆಗಳ ತೊಡೆತ,
ನಾಟ್ಯಪ್ರಿಯನ್ ಸಂಚಾರಮಾಡುವೆಡೆ ಗೊರಸೂರಿ. ಅಲ್ಲಿ
ಆ ರಾಯಗುವರರನ್ ನಿಲಿಸಿದನ್ ನಮ್ಮೊಡೆಯನಾ ಗಡ್ಡೆಗವಿಯೆ
ಕೆಟ್ಟುಳಿದ ಹೆಲನರ್ಯೆತರೆ ಕೊಲಲು, ಕೈಬೇಟೆ–ನಮ್ಮವರು ಬರಲು
ನೆರವಪ್ಪುದೊಂಬೊಂದು ನೆನಹಿನಲಿ. ಮುಂದುಪ್ಪುದನ್ ತಪ್ಪುಗಂಡನ್.
ಏತಕೆನೆ, ಕಾಳಗದ ಕೀರ್ತಿಯನ್ ಹೆಲನರಿಗೆ ಸಲಿಸೆ ಭಗವಂತನ್,
ಸಂಜೆ ಕವಿಯದ ಮುನ್ನ, ಮೈಜೋಡುಗಳ ತೊಟ್ಟು, ಹಡಗಿಂದ ನೆಗೆದು
ದ್ವೀಪವನ್ ಸುತ್ತಿರಿದು ಮುತ್ತಿದರ್. ಎತ್ತ ತಿರುಗಲುಮಿಲ್ಲದೆಮ್ಮೋರ್

ಬೀರುಗಲ್ಗಳ್, ಬಿಲ್ಲ ತಿರುವಿಂದ ಜೀವಮನುಣಲ್ ಬರ್ಪ ಕೋಲ್ಗಳ್,
ನೆರನಿರಿಯೆ, ತೊಪ್ಪತೊಪ್ಪನೆ ಕುಪ್ಪೆಯೊಟ್ಟಿದರ್. ಕಡೆಗೆ, ಹಳ್ಳಗಳು
ಕೂಡಿ ಹೊಳೆ ಹರಿದಂತೆ ನುಗ್ಗಿ ಬಂದೆತ್ತಲುಂ ಕೂಡಿಕೊಂಡೊತ್ತಿ,
ಕುರಿದರಿದು, ಕತ್ತರಿಸಿ, ತುಳಿತುಳಿದು, ಆ ರಾಜಪುತ್ರರನ್ ಕೊಂದರ್. :
ಹುತೌಶ: ಓ ದುಷ್ಟ ದೈವವೇ! ಪಾರ್ಸಿಕರ ಬುದ್ಧಿಯನ್ ನೀನೆಂತು ಮುನಿದು
ಕೆಡಿಸಿದಯ್. ಅಥಿನಿಯನರಾವೇಶಮನ್ ಮುರಿಯೆ ಪೋದವನು ತಾನೆ
ನನ್ನ ಮಗನುತ್ಸಾಹಭಂಗಮನ್ ಕಂಡನೇ! ಮುನ್ನೆ ಆ ಮರಥಾನ್
ಕೊಂಡ ಬಲಿ ಸಾಲದೆಂದೀ ಪಿರಿಯ ಸಾಮ್ರಾಜ್ಯಸತ್ವಮನ್ ಕಟ್ಟಿ
ಕೊಂಡುಯ್ದು ಕೊಟ್ಟನೇ, ಪಗೆತೀರ್ಚುವೆಣಿಕೆಯೊಳ್! ಆಯ್ತಾಯ್ತು,
ಮುಂದೇನು,
ಕತೆ ಮುಗಿಸು. ದುರ್ವಿಧಿಯ ಮಗನೇನು ಮಾಡಿದನು: ನೀ ಬಿಟ್ಟುದೆಲ್ಲಿ?
ದೂತ: ತೀರದೆತ್ತರದೊಂದು ಗುಡ್ಡದೊಳ್ ಸಿಂಹಪೀಠದೊಳಿದ್ದು, ಯುದ್ಧಂ
ಮುರಿದುದನ್ ಶ್ರೀಕ್ಷಯಾರ್ಷನ್ ಕಂಡು, ತನ್ನಣುಗಮಕ್ಕಳ್ಗೆ ನೊಂದು,
ಬೇಗೆದ್ದು, ವಸ್ತ್ರಮನ್ ಪರಿಯುತ್ತ, ಭೂಸೈನ್ಯವೆಲ್ಲ ಹಿಮ್ಮೆಟ್ಟಲ್
ಬೆಸಸಿದನ್. ನಿಂದ ಕಡೆ ನಿಲ್ಲದೆಯೆ, ಕಣ್ಮುಚ್ಚಿ ನೆಲಕೆ ತಲೆಯೂರಿ
ಮಲಗದೆಯೆ, ಹಸಿದು ಬಾಯಾರುತ್ತ, ಕುತ್ತದಲಿ ಬರದಲ್ಲಿ ಸತ್ತು,
ದಿನದಿನಕೆ ಸೋರಿದುದು ಸಿರಿಯ ಪಡೆ. ಹಿಂದೆ ಬೆನ್ನಟ್ಟುವರ್ ಪಗೆವರ್:
ಮೇಲೆರಗಿ ಕುಟ್ಟುವರ್. ಕಡೆಗೆ, ಆ ಹಾಳು ಹೆಲಸನ್ ದಾಂಟಿ ಕಳೆದು,
ಥೆಸಲಿಯನ್, ಮೆಕೆಡೋನ್ಯಮನ್ ಕಡೆದು, ಪಂಗ್ಯಪರ್ವತದ ಬಳಿ ಸಾರ್ದು,
ಸ್ಟ್ರೈಮನದಿ ತೀರದೊಳ್ ಬೀಡ ಬಿಟ್ಟೆವು, ದಣಿದು. ಆ ಇರುಳ್ ದೈವಂ
ಕಣ್ದೆರೆದು ನೋಡಿದುದು ನಮ್ಮನ್. ಹಿಮವಿಲ್ಲದಾ ಋತುವಿನಲ್ಲಿ
ಹಿಮ ಬಿದ್ದು, ಆಳದಗಲದ ಹೊಳೆಯ ನೀರೆಲ್ಲ ನೀರ್ಗಲ್ಲ ಗಡ್ಡೆಗಟ್ಟಿ,
ದೇವರನು ಶಪಿಸುತ್ತಿದ್ದವರೆಲ್ಲ ಹೊಗಳುವರೆ, ಕುಣಿಯುವರೆ, ಹಾಡಿ
ಹರಸುವರೆ ದ್ಯೌಸ್‌ಪಿತರನನ್, ಭೂಮಿತಾಯಿಯನ್, ಬೆಳಕು ಹರಿದೊಡನೆ
ಪಡೆ ಹಾಯೆ ಮೊದಲಾಯ್ತು: ರಾಜನುಂ, ಪಿರಿಯರುಂ, ಪಡೆಯ ಮುಂಗುಡಿಯುಂ,
ಮೊದಲೆಳೆಯ ಬಿಸಿಲಲ್ಲಿ. ಬಿಸಿಲೇರಿ ಕಾಯ್ದಾಗಿ–ಅಹ–ಹೊಳೆ ಕರಗಿ,
ಪದರಾಡಿ, ಬಾಯ್ಬಿಟ್ಟು, ಮೇಲೆ ಮೇಲುರುಳ್ವರನ್ ಕೆಳಗೆ ಪಾತಾಳಂ
ನುಂಗಿದುದು: ಆ ನೂಕುನುಗ್ಗಲಲಿ ಹುಯಿಲಿನಲಿ ಮೊದಲಾರು ಸತ್ತನ್
ಅವನದೇ ಪುಣ್ಯಂ! ಓ ತಾಯೆ, ಬಣ್ಣನೆಯ ಮಾತಲ್ತು, ಸತ್ಯಂ
ನಾನ್ ಪೇಳ್ದುದೆಲ್ಲಮುಂ. ಪಾರ್ಸಿಕರ ಪೂವುಕುಡಿ ಸುರುಟಿದುದು: ಸುಟ್ಟು
ಕರಿಕಾದುದೆಳೆಯರೆಲ್ಲರ ದಂಡು. ಪಿರಿಯರೇ, ನಾನ್ ಬದುಕಿ ಬಂದು
ಬಿದ್ದೆನೇ ತಾಯ್ನಾಡ ಮಡಿಲಿನಲಿ!–ನಮ್ಮಳವೆ? ಆ ದೈವಚಿತ್ತಂ!

ಮೇಳ: ಓಕ್ರೂರು, ಮತ್ಸರದ ದೈವವೇ! ಓ ರಾಕ್ಷಸರ ಚಂಡಶಕ್ತಿ!
ಆನೆಹೆಜ್ಜೆಯನಿಟ್ಟು ಹೊಸಕಿದೆಯ ಹೊರಳಿಸುತ ಪಾರಸಿಕಜನವನ್!
ಹುತೌಶ: ಪೋಯಿತ್ತು, ಪೋಯಿತ್ತು, ಆ ಪಳೆಯ ಭಾಗ್ಯಂ! ಕೇಳ್ದೆಯಾ ಪಾಪೀ!
ಓ ಇರುಳ್ ಸುಳಿದಾಡಿ ಕಾಣಿಸಿದ ನೆಳಲ್ಗಳಾ, ನಿಮ್ಮ ಮುಂಗಾಣ್ಕೆ
ದಿಟವಾಯ್ತು! ಪಿರಿಯರಿರ, ನೀವೊರೆದ ಸ್ವಪ್ನಫಲ ಬರಿ ಬಯಕೆಯಾಯ್ತು.
ಆದೊಡಂ, ಬಿಡದಹುರುಮಸ್ದನನ್ ದೈನ್ಯದಿನ್ ಬೇಡುವೆನ್; ನೀವು
ಪೇಳ್ದಂತೆ, ಭೂತಾಯ್ಗೆ, ಪಿತೃಗಳ್ಗೆ, ತನಿಯೆರೆಯೆ ತರ್ಪಣವ ತರ್ಪೆನ್.
ಕೈಮೀರಿಹೋಯ್ತು ಹಿಂದಿನದೀಗ: ಶುಭಮಕ್ಕೆ ಮುಂದೆ ಬರಲಿಹುದು!

ಈ ಎಡರಿನೊಳ್ ನಿಮ್ಮ ನಲ್ಪೆಸನ್, ಜನಮಂಜದಂತೊಳ್ಪುನುಡಿದು,
ನಂಬುಗೆಯನುಳಿಸುವುದು; ದ್ರೋಹಮೆಣಿಪರನೆಲ್ಲ ಕಾದು ತಡೆಯುವುದು.
ಒಳಗಣಿನ್ ನಾನ್ ಬರ್ಪ ಮುನ್ನಮೇ, ಮಗನಿಲ್ಲಿಗೈತಂದೊಡವನನ್
ಸಂತೈಸಿ ಮೆಲ್ನುಡಿಗಳಿನ್ ಮನೆಗೆ ಕರೆತನ್ನಿ: ಕೇಡಡಸಿದಾಗಳ್,
ಕೇಡಿಂಗೆ ಕೇಡನೇ ಕೂಡಿಸುವುದೆಮ್ಮರಿವು: ಅಂತಾಗಬಾರದು.

[ಕೆಳದಿಯರೊಡನೆ ಹೋಗುವಳು]

ಮೇಳ: ದೇವಾಧಿದೇವಾ, ಮಹದೇವ, ನೀನ್ ಮುರಿದೆ ಪಾರಸಿಕರುಕ್ಕನ್.
ಮೊದಲೆತ್ತಿ ಸಾಮ್ರಾಜ್ಯಸುಖವಿತ್ತು, ಮುನಿದೀಗ ನೀನ್ ಮುರಿದೆ ಸೊಕ್ಕನ್.
ಮಿಗಿಲಾದ ಹೆಮ್ಮೆಮೆರೆ ಪಲಪಡೆಯ ಪಲರಾಣ್ಮರೀಗೆತ್ತ ಪೋದರ್?
ಸೂಸಪುರದೆಕ್ಬಟನದಾ ಹೊಳೆವ ಬೀಡಿನವರಿತ್ತ ಬರದಾದರ್!
ಕತ್ತಲೆಯ ತೆರೆಯ ಮರೆಯಾದರ್,
ನೀನಮರೆ ಕಣ್ಣ ಮರೆಯಾದರ್,
ನಳಿತೋಳ ಪೊನ್ ಸೆಳೆಯೆಳವೆಂಡಿರತ್ತತ್ತು
ಮೊಗದೆರೆಯ ಕೀಳ್ವರ್,
ಹೊಳೆಯಾಗಿ ಕಣ್ಣ ನೀರಿಳಿಯುತಿರೆ, ಮೆಯ್ಯಿತ್ತು
ತಾಯ್ವಿರಹ ಬೀಳ್ವರ್.
ಹೊಸಒಲುಮೆ ಹೂವಾಗಿ ಹಣ್ಣಾಗದಾ ಮುನ್ನೆ,
ತನ್ನವನ ಕಳೆದುಕೊಂಡಿನಿಯಳ್
ಬಸವಳಿದು ಸಿರಿಮಂಚದಾ ನಲಿವನುಣ್ಣದೆಯೆ,
ತನ್ನೊಳೇ ಬಾಡುವಳು ತನಿಯಳ್.
ಅವರೊಡನೆ ನಾನುಮಿದೊ ಬಾಡುವೆನು, ಬೀಳುವೆನು, ಕೀಳುವೆನು–
ನಾಡನ್,
ಆ ಪೋದ ವೀರರನ್, ನೆನೆನೆನೆದು ಪಾಡುವೆನು ಕಟ್ಬಳಲ, ಕೂರಳಲ
ಪಾಡನ್.

೧.೧

ಏಷ್ಯಮಾತೆ ಮಕ್ಕಳಳಿಯೆ
ಬಿಕ್ಕಿ, ಬಿಕ್ಕಿ, ಅಳುವಳು.
ಶ್ರೀಕ್ಷಯಾರ್ಷ ಕರೆದನಯ್ಯೊ,
ಶ್ರೀಕ್ಷಯಾರ್ಷ ಕಳೆದನಯ್ಯೊ,
ಶ್ರೀಕ್ಷಯಾರ್ಷ ಪಡೆಯನೆಲ್ಲ
ಮುರಿದನೆಂದು ಹಳಿವಳು.
ಸೂಸಪುರದ ಮಕ್ಕಳೆಲ್ಲ
ದರ್ಯವುಷನ ನೆನೆವರು.
ಬಿಲ್ಲನೊದರಿ ಗೆಲ್ಲಗೊಂಡು
ಮಗುಳ್ವೆನೆಂದು ಹೊಗಳ್ವರು.

೧.೨

ಕಡಲ ಗೆದ್ದ ಕಲಿಗಳೆಲ್ಲ
ಕಡಲಿನ ಪಾಲಾದರು.
ನಾವೆಗಳನು ಕರೆದನಯ್ಯೊ,
ನಾವೆಗಳನು ಕಳೆದನಯ್ಯೊ,
ನಾವೆಗಳನ್ನು ಮೂಕಿ ನೂಕಿ,

ಯೋನರಿಂದ ಮುರಿದರು.
ಸೇನೆಗಳನು ಬಲಿಯ ಕೊಟ್ಟು,
ತಾನೊಬ್ಬನೆ ಉಳಿದನು.
ಯೋನರೂರ ಕೊಳದೆ ಬಿಟ್ಟು
ತಾನು ಬದುಕಿ ಬಂದನು.

೨.೧

ಮಿಕ್ಕವರು ಮೊದಲ ಕೊಲೆಯಾದರೋವೋ
ಸಲಮಿಸಿನ ಕರೆಗೊಕ್ಕಲಾದರಾಹಾ,
ನೆಲದಲ್ಲಿ ಹುದಿಯದೆಯೆ ಹೋದರೋಹೋ,
ನಿಟ್ಟುಸಿರು ಬಿಟ್ಟುಬಿಟ್ಟಳಲೆಲ್ಲ ಕೊರಳಿಂದ ಹೊರಳಿ ಹೊರಳಿ,
ಕೆಟ್ಟ ಕೇಡೆದೆಯೊಳಗೆ ಮಡುಗಟ್ಟಿ, ಕೋಡಿಬಿದ್ದುರುಳಿ, ಉರುಳಿ,
ಉಕ್ಕುಕ್ಕಿ, ಅಳಿ, ಬನ್ನಿ, ಓ,ಓ.

೨.೨

ಅಲೆಯೆಸೆದು ಕೊಳೆನಾತವಾದರೋವೋ
ಮರಿಮೀನ ಬಾಯ್ಗೆ ತುತ್ತಾದರಾಹಾ,
ತಿಳಿಗಡಲ ನೆಗಳೊಡಲ ಹೊಕ್ಕರೋಹೋ,
ಒಡೆಯ ಬಾರದ ಕೊರಗು ಮನೆಗೆ, ಇನಿಯ ಬಾರದ ಕೊರಗು ಹೆಣ್ಗೆ,
ಮಕ್ಕಳಿಲ್ಲದ ಕೊರಗು ಮುಪ್ಪಿಂಗೆ, ಕಾವರಿಲ್ಲದ ಕೊರಗು ಮಕ್ಕಳ್ಗೆ,
ಕೊರಗು, ಕೊರಗಳಿ, ಬನ್ನಿ, ಓ, ಓ.

೩.೧

ಅಯ್ಯೊ, ಪರ್ಸದ ರಾಜ್ಯವೆಲ್ಲ,
ದ್ರೋಹಭಯಕೊಳಗಾಯಿತ್ತಲ್ಲ!
ಏಷ್ಯದಾ ಸಾಮಂತರೆಲ್ಲ
ಪೊಂದೆರೆಯ ತೆರಲೊಲ್ಲರಲ್ಲ!
ಅಖಿಮಿನಿಯರಾ ಪೀಠದಡಿಯಲ್ಲಿ
ಅಡ್ಡಬಿದ್ದೋಲಗಿಪರಿನ್ನಿಲ್ಲ:
ಸಡಿಲಿದುದು ಸಾಮ್ರಾಜ್ಯ: ರಾಜರ ಭಯವೆ ತೊಲಗಿತು: ಹೋಯ್ತು
ಬಲವೆಲ್ಲ.
ಜನರ ಬಾಯ್ಗಳ ಕಟ್ಟು ಕಳಚಿತು:
ಪಡೆಯ ಮಾತೋ ಸ್ವೇಚ್ಛೆಯಾಯಿತು:
ಹಿರಿಯರೆಂದೊಡೆ ಭಕ್ತಿ ಹೋಯಿತು:
ಕೀಳ್ಗಳಾಡಿತೆ ಆಟವಾಯಿತು:
ನಮ್ಮ ನೊಗವೋ ಬಿದ್ದುಹೋಯಿತು:
ಸಲಮಿಸಿನ ಕೊಲೆ ಬಿಡುತೆ ಬಿತ್ತಿತ್ತು:
ದೊರೆಯನಿನ್ನಾರ್ ದೇವರೆನುವರು? ಪರ್ಸಕಿನ್ನಾರ್ ಪೂಜೆ ಸಲಿಪರು?
ಪೆರ್ಮೆ ಮುಗಿಯಿತ್ತು,

[ಹುತೌಶ, ಕೆಳದಿಯರೊಡನೆ]

ಹುತೌಶ: ಕೆಳೆಯರೇ, ಕೇಡನರಿತವರೆಲ್ಲ ಬಲ್ಲರಿದ–
ಕೇಡುಹೊಳೆ ಕೊಚ್ಚಿ ಹರಿವಂದೆಂತು ನಮ್ಮ ಬಗೆ
ಬೆದರುವುದು ಕಂಡುಕಂಡುದಕ್ಕೆಲ್ಲ– ಭಾಗ್ಯದಲೆ
ನಲಿನಲಿದು ಕುಣಿಯುತಿರೆ, ಆ ಭಾಗ್ಯವೇ ನಮಗೆ

ನೆಲೆಯಿಂದು ನೆಚ್ಚುವುದು: ಅಂತೆ, ನನಗಿಂದೆಲ್ಲ
ಭಯ ತುಂಬಿ ತೋರುವುದು. ದೈವದ ವಿರೋಧವೇ
ಕಣ್ಗೆತ್ತ ಮಿಂಚುವುದು, ಕಿವಿಗಶುಭಗೀತೆಯೇ
ಮೊಳಗುವುದು, ಹೊಲಬುಗೆಟ್ಟುಸಿರೆಲ್ಲ ಬೆಚ್ಚುವುದು.
ಅದರಿಂದ, ರಥವುಳಿದು, ಭೂಷಣಂಗಳ ಕಳೆದು,
ಸಾಮ್ರಾಜ್ಯವೈಭವವ ತೆಗೆದಿಟ್ಟು, ಬೀಡಿಂದ
ಕಾಲ್ನಡಗೆಯಲಿ ಬಂದೆ–ಇದೊ ತಂದೆ ತನಿಗಳನು,
ನನ್ನ ಮಗನಯ್ಯಂಗೆ, ಪಿತೃಗಳಿಗೆ, ತನಿಯೆರೆಯೆ:–
ಅಚ್ಚಹಸು ಕರೆದ ಈ ಇನಿದಾದ ಬೆಳ್ಪಾಲು,
ಹೂಗೆಲಸಿ ಚಿಟ್ಟಜೇನಿಳಿಸಿದೀ ಚೆಂಜೇನು,
ಕೊಳದ ಕನ್ನೆಯರೀವ ತಿಳಿಯಾದ ತಣ್ಣೀರು,
ಕಾಡತಾಯಿಂದೊಗೆದ, ಕುಡಿವರಾನಂದದಾ
ಬಳ್ಳಿಗಳ ದ್ರಾಕ್ಷಿರಸ, ಎಳಹಸುರುಹೊಂದಳಿರ
ಸೊಂಪೆಲೆಯ ಹಿಪ್ಪೆಯಲಿ ಹಿಳಿದ ಈ ಕಮ್ಮೆಣ್ಣೆ,
ಈ ಹೂವುಕಟ್ಟುಗಳು, ಎಲ್ಲ ಹೆರುವೀ ನಮ್ಮ
ಭೂತಾಯ ಪುಟ್ಟಮಕ್ಕಳು. ಬನ್ನಿ, ಕೆಳೆಯರಿರ,
ತನಿಯೆರೆವೆ ಕೆಳಲೋಕವಾಸಿಗಳಿಗೀ ಸ್ಥಳದೆ:
ನೀವೆಲ್ಲ ಭಕ್ತಿಯಲಿ ಸೂಕ್ತವನು ಪಾಡಿ
ದರ್‍ಯವುಷದೇವನನ್ ಕರೆದು ಬರಮಾಡಿ.

ಮೇಳ: ಓ ರಾಣಿ, ಪಾರ್ಸಿಕರ ಪೂಜ್ಯಳೇ
ತನಿಯನೆರೆ ಕಿಳ್ನೆಲದ ಬೀಡಿಂಗೆ ನೀನು.
ನಾವು ಸೂಕ್ತವನೆತ್ತಿ ಪಾಡುವೆವು
ಕೇಳ್ವವೊಲು ಕೃಪೆಯಿಟ್ಟು ಕೆಳಗೊಯ್ಯುವವರು.
ಕತ್ತಲೆಯೊಳಾಳ್ವ ಓ ಸ್ಥಾನದೇವತೆಗಳಾ,
ಓ ಭೂಮಿ, ಓ ಹರ್ಮೀಸ್, ಓ ಪ್ರೇತರಾಜಾ,
ಬೆಳಕಿಂಗೆ ದರ್‍ಯವುಷನಾತ್ಮವನು ಕಳುಹಿ.
ನಾಡ ಕೇಡಿನ ಕೊನೆಗೆ ಮುದ್ದಾವುದದನು
ಪೇಳುವನು ತಾನೊಬ್ಬನವನು.

೧.೧

ಕೇಳ್ವುದೆ, ಓ ಧನ್ಯಾತ್ಮಾ, ದೇವತಾತ್ಮಾ, ರಾಜಾ,
ನಿನ್ನೆದೆಯೊಳ್ ಪೋಗಿ,
ಪರಿಪರಿಯಾ ನರಲುಲಿಯೊಳ್ ಪಾರ್ಸಿಕರಾ ಪಾಂಗಿನೊಳೇ
ಪ್ರಾರ್ಥನೆಯನ್ ಕೂಗಿ,
ಪೇಳುವುದು ಕೇಳುವುದೇ
ಕೀಳೆಳೆಯೊಳ್ ನಿನ್ನ ಕವಿ ತಾಗಿ?

೧.೨

ಓ ಭೂಮಿತಾಯ್, ಮಬ್ಬುನಾಡೊಳಗಾಳ್ಕೆವೆತ್ತಾ ಓ ಈಶರ್,
ಮೇಲೆ ಕಳುಹಿ ಆತನನ್.
ಸೂಸಪುರದೊಳ್ ಪುಟ್ಟಿದಾತನ್, ಅಖಿಮಿನಿಯರಾ ವಂಶದಾತನ್,
ಪಾರಸಿಕರಾ ದೇವನ್.
ಪರ್ಸದ ಮಣ್ ಮುಚ್ಚಿದವರೊಳ್

ಹೆಚ್ಚಿನಾತನ್–ಮೇಲೆ ಕಳುಹಿ ಆತನನ್.

೨.೧

ನಮ್ಮೊಲುಮೆ ವೀರನ್, ನಮ್ಮೊಲುಮೆ ಹುದಿಗೆ,
ನಮ್ಮೊಲುಮೆ ಕುಪ್ಪೆ ಹಿಡಿಮಣ್ಣು!
ಓ ಐಡೋನ್ಯೂಸ್, ಪಾಶದಿನ್ ನೀನ್ ಬಿಡಿಸು,
ಓ ಐಡೋನ್ಯೂಸ್,
ಆ ರಾಜಶ್ರೇಷ್ಠನನ್, ದರ‍್ಯವುಷನನ್

೨.೨

ಕಾಳಗದ ಪುಲಿ ತಾನ್, ಕಾಳಗದ ಪುಲಿಗಳನ್
ಪೋರ್ಕಳದೆ ಕಳೆಯನ್, ಸಾವಿಗೀಯನ್.
ಅಹ, ದೇವಮಂತ್ರಿ, ಪಾರಸಿಕ ಮಂತ್ರಸಭೆ–
ಗಹ ದೇವಮಂತ್ರಿ,
ಕಾಳಗವೆ, ಸಂಧಿಯೇ, ಅವನೆ ಬಲ್ಲನ್.

೩.೧

ಬಾರಯ್, ಒಡೆಯಾ, ಈಶ್ವರ, ಬಾರಯ್.
ಹಳೆಯೊಡೆಯಾ, ಕುಪ್ಪೆಯ ಮೇಲ್ ತೋರಯ್.
ಪೊನ್ನಿನ ಕೆರವನ್ ಕಾಲೊಳ್ ಮೆಟ್ಟಿ,
ತಲೆಯೊಳ್ ರಾಜರ ಮುಡಿಯನ್ ಕಟ್ಟಿ,
ಬಾರ ದರ‍್ಯವುಷ್, ತಂದೇ, ಬಾರಯ್.

೩.೨

ಹೊಸ ಹಾಳೆಡರ‍್ಗಳನಾಲಿಸು, ಬಾರಯ್.
ಒಡೆಯಂಗೊಡೆಯಾ, ನೀ ಮೈದೋರಯ್.
ನರಕದಂಧತಮ ಕಣ್ಮೇಲ್‌ಬೀಳೆ,
ನೊಂದೆವು, ಜವ್ವನಿಗರ್ ಬಾನ್ಗೇಳೆ;
ಬಾರ, ದರ‍್ಯವುಷ್, ತಂದೇ, ಬಾರಯ್.

೪

ಅಯಯ್, ಅಯಯ್!
ಓ ರಾಜರಾಜಾ, ಸಾಮ್ರಾಜ್ಯಮನ್ ತೊರೆದು ನೀನೇಕೆ ಪೋದಯ್!
ಇಮ್ಮಡಿಯ ಸೊಕ್ಕಿನಲಿ ಮರುಳಾಗಿ ನಿನ್ನ ಮಗ ತಾನೇಕೆ ಪೋದನ್!
ನಮ್ಮ ನಾವೆಗಳೆಲ್ಲ, ಇನ್ನು ನಾವೆಗಳಲ್ಲ, ಅಲ್ಲ, ಅಲ್ಲ!
ನಮ್ಮೆರೆಯ, ಬಾರಯ್ಯ, ಬದುಕಿಸಲು ನೀನಲ್ಲದಿಲ್ಲ, ಇಲ್ಲ!

[ಸಮಾಧಿಯಿಂದ ದರ‍್ಯವುಷನ ಬಿಂಬವೇಳುವುದು]

ದರ‍್ಯವುಷ್: ನಚ್ಚಿನರ ನಚ್ಚಿನರೆ, ಓ ನನ್ನ ಜವ್ವನದ
ಮೆಚ್ಚಿನೊಡನಾಡಿಗಳೆ, ಪಾರಸಿಕ ಪಿರಿಯರೇ,
ಅವ ತೊಡರೊಳ್ ತೊಡರಿ ಪೊಣರುವುದು ಸಾಮ್ರಾಜ್ಯ?
ನಿಮ್ಮ ದುಃಖದ ಗೀತೆ ಸೀಳಿ ಭೂಮಿಯನಿಳಿದು
ಏಕೆನ್ನನೆಬ್ಬಿಸಿತು? ಏಕೆನ್ನ ನಿಸಿದಿಗೆಯ
ಬಳಿ ಬಾಗಿ ಬಾಡಿ ನಿಂದಿರ‍್ಪಳೀ ನನ್ನರಸಿ?
ತನಿಯೆರೆತವೇಕೀಗ? ಸುಪ್ರೀತನಾಗುವೊಲು
ತಣಿಯುಣಿಸಿ, ಅಳಿದವರ ಕರೆತರ‍್ಪ ಶ್ರಾದ್ಧದಿಂ–

ದೆತ್ತಿದಿರಿ. ಇಳಿದಲ್ತು ಕೆಳಲೋಕದಿನ್ ಬೆಳಕ
ಮುಟ್ಟುವುದು: ಸ್ಥಾನದೇವತೆಗಳೋ ಬಲುಬೇಗ
ಹಿಡಿಯುವುದು, ಬಿಡುವುದೋ ಕಟ್ಟರಿದು.–ಅದೊಡಂ
ಬಂದಿಹೆನು ನನ್ನೊಂದು ಶಕ್ತಿಯನ್. ಹೊತ್ತು ಮೀ–
ರದೆ ಕೇಳಿ. ಏನ್ ಕೇಡು ಕಾಡುವುದು ಪರ್ಸಮನ್?
ಮೇಳ: ಅಂಜುವೆವು ಕಣ್ಣೆತ್ತಿ ನೋಡೆ,
ಅಂಜುವೆವು ನಿನ್ನೊಳಿದಿರಾಡೆ:
ಹಳೆಯ ಭಯ ನಮ್ಮನುಡುಗುವುದು.
ದರ್‍ಯವುಷ್: ಅಂಜಬೇಡ–ಅಳಲ ಪಾಡು ಕರೆಯೆ ಬಂದೆ ಕೆಳಗಣಿನ್.
ನೀಡು ಹೊತ್ತು ನಿಲ್ಲಲಾರೆ: ಹೇಳಿ ಬೇಗ–ಏನಳಲ್?
ಮೇಳ: ಅಳ್ಕುವೆವು, ಕೂರ್‍ವವನು ಕೇಳೆ,
ಅಳ್ಕುವೆವು ನಿನಗೆಲ್ಲ ಪೇಳೆ:
ಕೆಳೆ ಕೆಡುಕನೆಂತು ಪೇಳುವುದು?
ದರ್‍ಯವುಷ್: ಹಳೆಯ ಭಕ್ತಿ ಬಾಯ ಬಿಗಿದು ನುಡಿಸದಿರಲು ನಿಮ್ಮನು–
ನೀನು ಪೇಳು, ಕುಲದ ಪೆಣ್ಣೆ, ನನ್ನ ಮುತ್ತ ನಲ್ಲಳೇ,
ಮಾಣ್ದು ಕಣ್ಬನಿಗಲ, ಸುಯ್ಲು, ಕಿರಿದರಲ್ಲಿ, ನಡೆದುದನ್.
ಕಟ್ಟಿದುದಲೆ ಆಳ್ಗೆ ಕೇಡು: ನಿಡಿದು ಕಾಲ ಬಾಳಿರೆ,
ಕಡಲೊಳೆನಿತೊ, ನೆಲದೊಳೆನಿತೊ ಅರಸಿಕೊಂಡು ಬರುವುವು.
ಹುತೌಶ: ಎಲ್ಲ ಆಳ ಮೆಟ್ಟಿ ಮೆರೆದು, ಭಾಗ್ಯಶಾಲಿ, ಕರುಬಿಸಿ,
ದೇವರಂತೆ ಪರ್ಸದಲ್ಲಿ ಸೂರ್‍ಯನೆದಿರ್ ಬಾಳಿದೆ,
ಕಂಡೆ ಸುಖದ ಸಾವ, ಸಿಡಿಲ್ ನಾಡ ಪೊಯ್ವ ಮುನ್ನಮೇ!
ಎಲ್ಲ ಪೇಳ್ವೆನೊಂದೆ ಮಾತಿನಲ್ಲಿ, ಕೇಳು, ದರ್‍ಯವುಷ್,
ಪರ್ಸದಾಟವಾಗಿ ಹೋಯ್ತು: ಕೆಟ್ಟೆವು, ಮತ್ತೇಳೆವು.
ದರ್‍ಯವುಷ್: ಏನು? ರೋಗ ಕಾಡಿತೇ? ದ್ರೋಹ ತಲೆಯನೆತ್ತಿತೇ?
ಹುತೌಶ: ಎರಡು ಅಲ್ಲ; ಅಥೆನದ ಬಳಿ ಪಡೆಗಳೆಲ್ಲ ಅಳಿದುವು.
ದರ್‍ಯವುಷ್: ಆರು ನನ್ನ ಮಕ್ಕಳಲ್ಲಿ ಪಡೆಯ ಕೊಂಡು ಪೋದಮನ್?
ಹುತೌಶ: ಧೃಷ್ಟತನದ ಶ್ರೀಕ್ಷಯಾರ್ಷ. ಬರಿದುಮಾಡಿ ರಾಷ್ಟ್ರಮನ್.
ದರ್‍ಯವುಷ್: ಕಾಲಾಳ್ಗಳೊ, ನಾವೆಯೊ, ಈ ಹುಚ್ಚು ಕೆಲಸಕೊಡ್ಡಿತು?
ಹುತೌಶ: ಇರ್‌ತೆರಮುಂ ಇರ್‌ಪಡೆಯುಮಿನಿರ್‌ಕಳದೊಳ್ ನೂಂಕಿದನ್.
ದರ್‍ಯವುಷ್: ಆ ಅಳವಿಯ ಕಾಲಾಳ್ಗಳ್ ಕಡಲನೆಂತು ದಾಂಟಿದರ್?
ಹುತೌಶ: ಯಂತ್ರಗಳಿನ್ ಕಟ್ಟಿಸಿದನ್ ದಾರಿಗೊಡದ ತೆರೆಗಳನ್
ದರ್‍ಯವುಷ್:ಯಂತ್ರದಿಂದ! ಬಗ್ಗಿದುದೇ ಬೆಟ್ಟದ ತೆರೆ ಬಾಸ್ಪೊರಸ್?
ಹುತೌಶ: ಅಹುದು. ದೈವವಾವುದೊ ಹೊಕ್ಕವನನಂದು ಚಿಮ್ಮಿತು.
ದರ್‍ಯವುಷ್: ಅಹಾ! ಪಿರಿಯ ದೈವವದು–ಕೆಡಿಸಿತಲ್ಲ ಬುದ್ಧಿಯನ್!
ಹುತೌಶ: ಹೊಮ್ಮಿತೀಗ ಅದರ ಫಲ–ಅಳುವ ಪಾಡು ನಾಡಿನೊಳ್.
ದರ್‍ಯವುಷ್: ಕೇಳ್ದೆ, ಕೇಳ್ದೆ ಅಳಲ ಪಾಡ. ಬಿಡಿಸಿ ಹೇಳು ಕೇಡನು.
ಹುತೌಶ: ನಾವೆಯ ಪಡೆ ಮೊದಲು ಮುರಿದು ಕಾಲಾಳ್‌ಪಡೆ ಮುರಿಯಿತು.
ದರ್‍ಯವುಷ್: ಈಟಿಯಿರಿದು ಮುರಿದುಹೋಯ್ತೆ ಒಂದುಳಿಯದೆ ಆ ಪಡೆ?
ಹುತೌಶ: ಮಕ್ಕಳಳಿದ ಸೂಸಕೋಟೆ ಬೇಯುತಿಹುದು ಬಸಿರಿನೊಳ್.
ದರ್‍ಯವುಷ್: ಅಪಪ! ನಾಡ ಕಾವರೆಲ್ಲ, ಗಂಡರೆಲ್ಲ, ಹೋದರೇ?
ಹುತೌಶ: ಬ್ಯಾಕ್ಟ್ರಿಯದೊಳಗೊಬ್ಬನಿಲ್ಲ, ಮುದಿಯರಲ್ಲ ಮಡಿದೊರು.

ದರ‍್ಯವುಷ್: ಓ ಮಗನೇ! ತೂರಿದೆಯಾ ಪೋರ್‌ಬಲ್ಮೆಯ ಚಿಣ್ಣರನ್!
ಹುತೌಶ: ತಾನೊಬ್ಬನೆ–ಶ್ರೀಕ್ಷಯಾರ್ಷ–ಕಾಪಿಲ್ಲದೆ, ಕಾಡಲೆಯುತ–
ದರ‍್ಯವುಷ್: ಪೇಳು, ಪೇಳು–ಬದುಕಿಹನೇ? ಏನಾದನ್? ಉಳಿವುಂಟೇ?
ಹುತೌಶ: ಎರಡು ನೆಲವ ನೊಗವನಿಟ್ಟು ಬಂಧಿಸಿದೆಡೆ ಬಂದನು.
ದರ‍್ಯವುಷ್: ದಾಟಿದನೋ? ನಮ್ಮ ಕರೆಯ ಸೇರಿದೊಸಗೆ ಬಂದುದೋ?
ಹುತೌಶ: ಬಂದುದು, ಬಂದುದು, ಇಂದೆ ಎಲ್ಲ ಬಂದುದು.
ದರ‍್ಯವುಷ್: ಓ, ಹುತೌಶ, ಎನಿತುಬೇಗ ಕೇಡೆರಗಿತು! ಮಗನೆ, ಮಗನೆ,
ಪೊಯ್ದನೆ ದ್ಯೌಸ್ ನಿನ್ನನಿಂತು! ಪಲವು ಕಾಲ ಸಲಲು, ಸಲ್ವು–
ದೆಂದು ಬಗೆದ ದೇವವಾಣಿ ಈಗಳೆ ಅದು ಪಣ್ತುದೇ!
ಕೇಡಿಗೋಡಲೆಳಸಲೊಬ್ಬ, ದೈವವವನ ತಳ್ವುದು.
ಈಗ ನಮಗೆ, ನಮ್ಮ ಕೆಳೆಗೆ ಕೇಡ ಹಳ್ಳ ಹರಿವುದು.
ಅರಿಯದ ಮಗ, ಸಾಹಸಕ್ಕೆ, ಯೌವನಮದ ಸೊಕ್ಕಿಸೆ,
ಕಯ್ಯನಿಟ್ಟು, ದಿವ್ಯ ಹೆಲೆಸ್ಪಾಂಟನೊತ್ತಿ ಕಟ್ಟುವೆ
ದಾಸನಂತೆ ತೊಡರ‍್ಗಳಿಂದ, ಬಾಸ್ಪೊರಸಿನ ಶಕ್ತಿಯನ್
ತೆರೆಯ ತಡೆದು ಕುಗ್ಗಿಸುವೆ, ಪಿರಿಯ ಪಡೆಗೆ ತೆರಪುಮಾಡಿ,
ಸೃಷ್ಟಿಸಹಜ ಭೂತಬಲವ ಮೆಟ್ಟಿ ನಾನು ಮೀರಿಸುವೆ,
ಎಂದು ಪೂಣ್ದು, ಸಾವ ಮರ್ತ್ಯನಾ ಅಮರ್ತ್ಯರೆಲ್ಲರೊಡನೆ,
ಆ ಪೊಸೈಡನೊಡನೆ, ಹುಚ್ಚ, ಸೆಣಸಿ ತಾನೆ ಕೆಟ್ಟನು.
ಅಳವುಮೀರಿ ಆತ್ಮಗೆಟ್ಟನಲ್ತೆ ಮಗನು? ಈಗಳೋ,
ನಾನು ತಂದ ಸಿರಿಗಳೆಲ್ಲ ಸಿಕ್ಕಿದ ಕೈ ಸೂರೆಯೇ!
ಹುತೌಶ: ಬುದ್ಧಿಶೂನ್ಯರೆಲ್ಲ ಸೇರಿ, ಹೇಳಿ, ಹೇಳಿ, ಕೇಳಿದನ್
ಧೃಷ್ಟತನದೊಳಾ ಕ್ಷಯಾರ್ಷ. ಮತ್ತೆ, ಮತ್ತೆ, ಒತ್ತುವರು–
ನೀನು ವೀರ, ದೇಶದೇಶಗಳನು ಗೆದ್ದು, ಪರ್ಸಕೆ
ಧನವ ತಂದೆ; ಅವನು ಕೋಣೆಯೊಳಗೆ ಖಡ್ಗ ಝಳಪಿಸಿ,
ತಂದೆಯ ಸಿರಿಗೊಂದುಮಿಲ್ಲ ಸೇರಿಸಿದುದು–ಎಂದು ಜರೆಯೆ,
ಜಯವ ಬಯಸಿ ಪಡೆಯ ಕೊಂಡು ಹೆಲಸಿನೆಡೆಗೆ ನುಗ್ಗಿದನ್.
ದರ‍್ಯವುಷ್: ಒಳ್ಳಿತೆಸಕಂಗೆಯ್ದರೆಲ್ಲರುಂ, ಪೆರ್ಮೆಯದು!
ಮರೆಯದುದು! ಇಂತಪ್ಪ ಭಂಗಮೆರಗದು ಮುನ್ನ
ಸೂಸಕ್ಕೆ, ಏಷ್ಯದಾ ಕುರಿ ಬೆಳೆವ ಬಯಲ್ಗೆಲ್ಲ
ಒಬ್ಬನಾಳ್ ಪೊಂಗೋಲ್ ಪಿಡಿದಾಳ್ವ ಪೆಂಪನಿ–
ತ್ತಂದಿನಿನ್ ದೇವರಾಜನ್. ಮೊದಲ್, ಮೇಡಸ್ ಆ
ಪಡೆಗೊಡೆಯ, ಮೇಧಾವಿ. ಅವನ ಮಗ ಜಾಣ್ಮೆಯಿನ್
ರಾಜ್ಯವನ್ ಸ್ಥಿರಗೆಯ್ದನಾತ್ಮಸಂಯಮಗೊಂಡು.
ಮೂರನೆಯನಾ ಕುರುಸ್, ಸೌಭಾಗ್ಯದೆರೆವೆಟ್ಟು,
ನಾಡೊಳೆತ್ತೆತ್ತಲುಂ ಲಕ್ಷ್ಮಿಯನ್ ಶಾಂತಿಯೊಡ–
ನಾಡಿಸುತ, ಲಿಡಿಯರನ್ ಫ್ರಿಗ್ಯರನ್ ರಾಜ್ಯದೊಳ್
ಕೂಡಿಸುತ, ಯುವನರನ್ ಸಾಗರದ ತೆರೆವರೆಗೆ
ಒತ್ತಿಕೊಂಡಾಳಿದನ್: ಆವ ದೇವರ ಮುನಿಸು–
ಮಾ ಸುಮತಿಯೊಳ್ ಪೊಗದು. ಅವನಣುಗ, ಕಂಬುಶನ್
ನಾಲ್ಕನೆಯ ರಣರಂಗಸಿಂಹನ್. ಅಯ್ದನೆಯನ್
ಆ ಮರ್ದಸ್, ಪರ್ಸದ ಕಳಂಕಂ. ಪಳಮೊರೆಯ

ನಾಣ್ಚಿಸಿದೊಡರ್ತಫರ್ನನ್ ಕೆಳೆಯರಿನ್ ಕೂಡಿ
ಕೊಲೆಗೆಯ್ದನರಮನೆಯೊಳ್. ಆಗೆನಗೆ ಕಟ್ಟಿದುದು
ರಾಜಪಟ್ಟಂ.–ವಿಜಯ ಸೈನ್ಯಮನ್ ದೆಸೆದೆಸೆಗೆ
ನಡಸಿದೆನ್, ದೆಸೆದೆಸೆಗೆ ಕೀರ್ತಿಯನ್ ಬೆಳಗಿದೆನ್–
ಈ ಸರ್ವನಾಶವನ್ ತಾರೆನೇ ಪರ್ಸಕ್ಕೆ!
ಕ್ಷಯಾರ್ಷನ್, ನನ್ನ ಮಗನೆಳೆಯನಾಗೆಳೆತನದ
ಬುದ್ಧಿಯನ್ ಮಾಡುವನ್, ನಾನ್ ಪೇಳ್ದ ಬುದ್ಧಿಯನ್
ಕೈ ಬಿಟ್ಟು. ನೀವ್ ಬಲ್ಲಿರ್, ಓ ಎನ್ನ ಮಂತ್ರಿಗಳೆ,
ನಾವೊಮ್ಮೆ ಗೆಲದೊಡೆಯು, ಸಾಮ್ರಾಜ್ಯವುಳಿಸಿದೆವು.
ಮೇಳ: ಓ ಸ್ವಾಮಿ ದರ‍್ಯವುಷ್, ಹೇಳೆಮಗೆ, ಕೊನೆಯೇನು–
ಈ ನಿನ್ನ ಮಾತುಗಳ ಪರಿಣಾಮ? ಬೆಳಸುವುದು
ಮತ್ತೆಂತು ಪರ್ಸಸಾಮ್ರಾಜ್ಯದಾ ಬಲಗಳನ್?
ದರ‍್ಯವುಷ್: ಮತ್ತೊಮ್ಮೆ ಹೆಲಸಿನೆಡೆಗೆತ್ತದಿರಿ–ಮೇಡಿಕರ
ಪಡೆಯೆನಿತು ಪೆರ‍್ಚೆಯುಂ. ಏಕೆಂಬಿರೋ, ಕೇಳಿ,
ಅಲ್ಲಿ ನೆಲನೇ ತನ್ನ ಮಕ್ಕಳ್ಗೆ ಕಾದುವುದು.
ಮೇಳ: ನಿನ್ನ ನುಡಿಗೇನ್ ಪುರುಳ್? ನೆಲನೆಂತು ಕಾದುವುದು?
ದರ‍್ಯವುಷ್: ಬರ ಬಡಿದು ಕೊಲ್ಲುವುದು ಪಡೆ ಪೆರ‍್ಚಿದನಿತುಂ.
ಮೇಳ: ಒಳ್ಳೆಯಾಳ್ಗಳನಾಯ್ದು ಕಳುಹಿದೊಡೆ ಮಿತಿಯಿನ್?
ದರ‍್ಯವುಷ್: ಹೆಲಸನಲೆಯುತ್ತೀಗಳುಳಿದಿರ‍್ಪ ಪಡೆಗಳೊಳ್
ಒಂದು ಪಿಡಿ ಮತ್ತೆ ಮರಳದು ಬದುಕಿ ಪರ್ಸಕ್ಕೆ.
ಮೇಳ: ಏನೆಂದೆ? ಆ ಉಳಿದ ಪಾರ್ಸಿಕರ ದಳಗುಳಂ
ಬಾರವೇ ಹೆಲ್ಲೆಗಡುವನ್ ದಾಂಟಿ, ಯೂರೋಪಿನ್?
ದರ‍್ಯವುಷ್: ಕೆಲವರ್, ಪಲವರೊಳ್. ದೇವವಾಣಿಗಳೆಲ್ಲ
ದಿಟವಾಗೆ–(ಎಂದು ದಿಟವಾಗವವು?)–ನಾವೀಗ
ಕಂಡುದೇ ಪೇಳದೇ ಮುಂದೆಯೂ ಆಗುವುದ?
ಪೊಳ್ಳಾಸೆಯಿಂದವನ್ ತಿರುಳಾಯ್ಕೆಯಾಯ್ದು, ಆ
ಬೀಯೋಷಿಯದ ಬಯಲ ತಣ್ಪೊಳೆ ಅಸೋಪಸಿನ
ದಡದಲ್ಲಿ ಚಳಿಗಾಲವನ್ ನೂಂಕೆ ಬಿಡಿಸುವನು.
ಏನಪ್ಪುದದರಿಂದ? ದುಷ್ಕಾರ‍್ಯಕಪ್ಪ ದುಃಖ!
ನಿರ್ದೈವಿಗಳ ಮದಕೆ ಕಾದಿರ‍್ಪ ಶಿಕ್ಷೆ!
ಹೆಲಸಿಂಗೆ ಹೋದವರು ಭಯ ಮರೆತು ಕೊಬ್ಬಿನಲಿ
ದೇವಾಲಯಂಗಳ್ಗೆ ಕಿಚ್ಚಿಕ್ಕಿ ಸೂರೆಗೆಯ್ದರ್.
ಭಕ್ತಿಯೆಂಬುದ ಕಾಣೆ–ಬಲಿಪೀಠಗಳನೊಡೆದು,
ಪ್ರತಿಮೆಗಳ ಕಿತ್ತೆಸೆದು, ಪೂಜೆ ಸಾಮಗ್ರಿಗಳ–
ನಿಟ್ಟಾಡಿ, ಹೊಲೆಗೆಯ್ದರೆಲ್ಲಮನ್. ಮಾಡಿದೀ
ಪಾಪಂಗಳುಣ್ಣದೇ ಪೋಕುಮೇ? ಉಣುತಿರ್ಪರ್,
ಇನ್ನುಮುಣುವರ್, ಕಟ್ಟಿದಾ ಬುತ್ತಿ ಸಮೆಯದೆಯೆ.
ಪ್ಲಾಟಿಯದ ನಿಟ್ಟುಗಳ ಮೆತ್ತುವುದು ನೆತ್ತರಿನ್
ಡೋರಿಕರ ಕಯ್ಯಿರಿಟಿ. ಮೂರುತಲೆಗಳ್ಗುಲಿದು
ಕಲಿಸುವುವು ಮಾತಿಲ್ಲದೊಟ್ಟೊಟ್ಟು ಹೆಣಬಣಬೆ–
ಆಳ್ಗಲ್ಲ, ಮರ್ತ್ಯಂಗೆ, ಹೆಮ್ಮೆ ಬಗೆ, ಎಚ್ಚರಿಕೆ ಎಂದು.

ಆ ಸೊಕ್ಕು ಹೂವಾಗಿ, ಕೊರಗಿನಲಿ ತೆನೆಯಾಗಿ,
ಅವ ಹಂಬಲುಮಳಿದ ಬೆಳೆಯಾಗಿ, ಕೊಯ್ಯುವುದು
ಪಾಪಫಲವನು, ತಿಳಿ: ನೆನೆ ಅಥೆನ್ಸನ್, ಹೆಲಸನ್.
ಅವೊನುಂ ಹೆಬ್ಬಯಕೆಗಲವತ್ತು, ಮಿತಿಮೀರಿ,
ಕಯ್ಗೆ ಬಾರದ ಗುರಿಗೆ ಕಟ್ಟೊಲ್ಮೆಯನ್ ತೆತ್ತು,
ಕಳೆಯಬಾರದು ದೇವರಿತ್ತೊಂದು ಭಾಗ್ಯವನ್.
ಗಗನಕ್ಕೆ ನೆಗೆದಡರುವರ ಹಮ್ಮುಗಳ ಮೆಟ್ಟಿ,
ತಕ್ಕ ಕಾಲದೆ ಕೊಬ್ಬನಿಳಿಸದಿರನಾ ಸ್ಯೂಸ್.
ಆದುದರಿನವನಿಲ್ಲಿ ಬಂದಾಗ, ಮಂತ್ರಿಗಳೆ,
ಒಳ್ಮಾತುಗಳನಾಡಿ ಬುದ್ಧಿಯನು ಹೇಳುವುದು,
ಮದ ಹೆಚ್ಚಿ ಮತ್ತೊಮ್ಮೆ ದೇವರನು ಕೆಣಕದಂತೆ.
ನೀನುಂ, ಕ್ಷಯಾರ್ಷನಾ ಮುತ್ತಬ್ಬೆ, ನಲ್ಲರಸಿ,
ಓ ಹುತೌಶಾ, ಹೋಗು, ಒಳಗಣಿನ್ ಶುಭ್ರತಮ–
ವಸ್ತ್ರವನ್ ಕೊಂಡು ಬಾ: ಎದಿರ್ಗೊಳಲ್ ಕಂದನನ್.
ದುಃಖದೊಳ್ ಗೀಳಿಟ್ಟ ಬಟ್ಟೆಯೊಳ್ ಬರ್ಪವನ
ಸಂತೈಸು ಮೆಲ್ನುಡಿಗಳಿನ್–ನಿನ್ನ ಮಾತೊಂದ
ಕೇಳ್ದಪನು. ನಾನಿನ್ನು ತೆರಳುವೆನು ನೆಲದಡಿಯ
ಕತ್ತಲೆಗೆ. ಓ ಮಂತ್ರಿವರ್ಯರೇ, ಮುದಿಯರೇ
ಕೇಡು ಬಳಸಿರ್ದೊಡಂ, ಸಂತೋಷದೊಳಗಿರಿಸಿ
ಚಿತ್ತವನ್. ಸತ್ತರ್ಗೆ ಸಿರಿಯ ಸುಖವಿಲ್ಲ!

[ಮರೆಯಾಗುವನು.]

ಮೇಳ: ಹಿಂದಾದ, ಮುಂದೆ ಬರುವೆನಿಂತೊಂದು ಕೇಡುಗಳು
ಪರ್ಸಜನಕಕಟಕಟ! ಕೇಳಿ ಎದೆ ಬಿರಿದುದೇ!

ಹುತೌಶ: ಓ ದೈವವೇ, ಎನಿತು ದುಃಖಗಳು ಬಸಿರಲ್ಲಿ
ಬೆಂಕಿಯನು ಸುರಿವುವು! ಮಗ, ಚಕ್ರವರ್ತಿ,
ಚಿಂದಿಯಲಿ ಬರೆ, ಎಂತು ಕಣ್ಣಾರ ಕಾಣ್ಬೆನೋ!
ಶುಭವಸ್ತ್ರಗಳ ಪೋಗಿ ಅಣಿಗೆಯ್ವೆ. ಓ ಕಂದ,
ನಿನ್ನ ತೊರೆಯೆನು ಬಂದ ಈ ದೊಡ್ಡದುಃಖದೊಳ್!

[ಕೆಳದಿಯರೊಡನೆ ಹೋಗುವಳು]

೧.೧

ಮೇಳ: ಏನ್ ಪೆರ್ಮೆ, ಏನ್ ಚೆಲುವು, ಏನ್ ಪೆಸರ್ ಪರ್ಸಂ,
ಏನ್ ಜನರ ಹರ್ಷಂ,
ನಾಡಿನುತ್ಕರ್ಷಂ,
ಮುತ್ತರಸ, ಗೆಲುವರಸ, ಚೆನ್ನರಸ, ಹೊನ್ನರಸ ದೇವಸಮನಂದು
ದರ್ಯವುಷನೆಮ್ಮನಾಳ್ವಂದು!

೧.೨

ಧರ್ಮ ಬಳಸಿದುದೆಮ್ಮ, ಶಕ್ತಿ ಬಳಸಿದುದು,
ಸೌಖ್ಯ ಬೆಳಸಿದುದು,
ಬಾಳ ಕುಣಿಸಿದುದು,
ಉಲಿಉಲಿದು, ಸುಲಿಸುಲಿದು, ಗೆಲಿಗೆಲಿದು, ನಲಿನಲಿದು ಪೋರ ಪಡೆ ಬಂದು
ನಗಿಸಿದುದು ಮನೆಯವರನಂದು.

೨.೧
ಅವನ ಜಯಮಾಲೆ
ಎನ್ನಳವೆ ಪೊಗಳೆ ಸಾಲೆ!
ಉರಿದ ಪೊಳಲೆನಿತು!
ಬಿರಿದೆದೆಗಳೆನಿತು!
ಜೀವೊಡೆಯ ಜೀಯೆಂದ ನಾಡೊಡೆಯರೆನಿತು!
೨.೨
ಆಡುತ್ತ ಗೆಲ್ವನ್,
ನಸುನಗುತ ನೋಡುತ್ತ ಗೆಲ್ವನ್,
ಬಲೆಗೆ ಬಲಿಯಾಗಿ
ಬಿಳದ ಹುಲಿಯಾಗಿ,
ಬಳಸುತ್ತ ಹೊಂಚುತ್ತ ಕೊಲ್ವ ಕಲಿಯಾಗಿ!
೩.೧
ಎನಿತೊಂದು ನಾಡುಗಳನಾಳಿದುದು ಸೂಸ,
ಹೊಮ್ಮುಡಿಯ ನಮ್ಮ ಸೂಸ!
ಎನಿತೊಂದು ದೀವಿಗಳನಾಳಿದುದು ನಗರಿ,
ಈ ನಮ್ಮ ರತ್ನನಗರಿ!
ಆತನಾಳಿಕೆಯಲ್ಲಿ ನೆಮ್ಮದಿಗೆ ನೆಮ್ಮಾಗಿ,
ಬಾಳಿದೆವು ಮೈತ್ರಿಯಲಿ ಬೆಸೆದು ಹೆಮ್ಮಿಗಿಲಾಗಿ,
ಮಿಥ್ರದೇವನ ಕಣ್ಣಿಗಾನಂದವಾಗಿ!
ಭೂಮಿ ನಿಮಿರಿದ ಕಡೆಯ ಕರೆಗೆ,
ಸೂರ್ಯ ಬೀಳುವ ಕಡಲ ತೆರೆಗೆ,
ಹಬ್ಬಿದುದು ನಮ್ಮ ತೋಳ್ ನಳನಳಿಸಿ ನೀಳವಾಗಿ!
೩.೨
ಹಬ್ಬಿದುದು ನಮ್ಮ ತೋಳ್ ಕಡಲಿನೊಳಗೆ,
ದೀವಿಯಿನ್ ದೀವಿಯೊಳಗೆ,
ಲೆಸ್ಬಾಸ್, ಖೀಯಾಸ್, ಸೇಮಾಸ್, ಪೇರಾಸ್,
ನ್ಯಾಕ್ಸಾಸ್, ಮಿಕೊನಾಸ್, ರ್‍ಹೋಡ್ಸ್,
ಲೆಮ್ನಾಸ್, ಪೇಫಾಸ್, ಸೈಪ್ರಸ್, ಸಲಮಿಸ್–
ತಾಯ ಹೆಸರನು ಕೊಂಡ ಆ ಮಗಳುದೀವಿ,
ನಮ್ಮ ದುಃಖದ ಮೂಲದಾ ಹೆಸರ ದೀವಿ–
ಅಕ್ಕತಂಗಿಯರಂತೆ ದೀವಿ,
ಬಳ್ಳಿಗೊಂಚಲಿನಂತೆ ತೀವಿ,
ಹಬ್ಬಿದುದು ನಮ್ಮ ತೋಳ್ ಪದಪದರಿ ಬೆದರೆ ಅಥೆನ್ಸ್!
೪
ಆಳಿದನು ಧರ್ಮದಲಿ, ನ್ಯಾಯದಲಿ, ನೀತಿಯಲಿ,
ಬಾಳಿದರು ಪ್ರಜೆಯೆಲ್ಲ ಭಕ್ತಿಯಲಿ, ಭೀತಿಯಲಿ,
ಪರ್ಸರೆಲ್ಲಾ ಕೂಡಿ ಯೋನರೆಲ್ಲಾ!
ಶಾಂತಿಯಲಿ, ಶೌರ್ಯದಲಿ, ಕುಶಲದಲಿ, ಕಲೆಗಳಲಿ,
ಒಬ್ಬರೊಬ್ಬರ ಮೀರಿ ಬಾಳ್ದೆವಲ್ಲಾ!
ದರ್ಯವುಷ್ ತೋಳಿನಲಿ ಬೆಳೆದೆವಲ್ಲಾ!

ಆಳ ಮುಂದಾಳಹುದ ನೆನೆದೆವಲ್ಲಾ!
ಇನ್ನೆಲ್ಲ ಮಾಯವಾಯ್ತು, ಹೆಬ್ಬಯಕೆ ಮಿಂಚಿಹೋಯ್ತು,
ಏರುಗಡಲಿಳಿತವಾಯ್ತು, ಮತ್ತೆ ತಲೆಯೆತ್ತದಾಯ್ತು,
ದೈವ ಮೊಗಮುರಿದೆಮ್ಮ ಕೆಟ್ಟೆವಲ್ಲಾ!
[ಕ್ಷಯಾರ್ಷ]

ಕ್ಷಯಾರ್ಷ: ಅಯ್ಯೋ, ಅಕಟಾ, ನಿರ್ಭಾಗ್ಯನ್ ನಾನ್!
ಸುಳಿವನೆ ತೋರದೆ ಪೊಯ್ದತ್ತೆನ್ನನ್
ನಿರ್ದಯ ವಿಧಿಯದು, ಪರ್ಸರ ಮುರಿದು.
ಅಕಟಾ! ನಾನೇಮೊಗದೊಳ್ ಕಾಣ್ಬೆನ್
ನೆರೆದೀ ಪಿರಿಯರನೀಗಳ್ ಸಭೆಯೊಳ್!
ಆಹಾ, ದೇವಾ, ಸಾಯೆನೆ ನಾನುಂ,
ಪೋದಾ ವೀರರ್,
ಪೋದಾ ಧೀರರ್
ಸತ್ತ ಸಾವಿನಲಿ ಪಾಲನ್ ಪಡೆದೇ!

ಮೇಳ: ಅಕಟಾ, ರಾಜಾ, ಪಡೆಯೇನಾಯ್ತಯ್?
ಇರಿಯಲ್ ಪೋದಾ ಪಡೆಯೇನಾಯ್ತಯ್?
ಪರ್ಸದ ಪೂಜ್ಯತೆ ಬಯಲಾಯ್ತೇ!
ಕುಡುವಾಳಿನ್ ಬಿದಿ ಕೊಯ್ದತ್ತೇ!
ಬೆಳಸಿದ ಮಕ್ಕಳಿಗಳುವುದೆ ನಾಡು,
ಶ್ರೀಕ್ಷಯಾರ್ಷನಾ ಹೆಮ್ಮೆಯ ಬೀಡು–
ಕೋಟಿ ಕೋಟಿ ಜನ, ಪರ್ಸ ಪೂವು,
ತುರುಗಿತು ಜವರಾಯನ ಬಾಯ್ಸೋವು!
ಏಷ್ಯದ ಮೆಯ್ಸಿರಿ, ಬಿಲ್‌ಜಾಣರ್,
ಕತ್ತಲೆನೆಲದೊಳ್ ಕಣ್‌ಕಾಣರ್!
ಅಯ್ಯೋ, ಅಯ್ಯೋ, ಎಲ್ಲಿ, ಎಲ್ಲಿ
ಆ ನಮ್ಮೊಲುಮೆಯ ಬಲ್ಲಾಳ್ಗಳ್?
ಏಷ್ಯವೆ ಕಳನೊಳ್ ಕಯ್‌ಕಾಲ್ ಮುರಿಯೆ
ಪೊಯ್ದವನಾರಯ್, ಓ ದೊರೆಯೇ!
೧.೧

ಕ್ಷಯಾರ್ಷ: ನಾನೇ, ನಾನೇ, ರಾಜ್ಯವನಳಿದೋನ್,
ಲಜ್ಜೆ ಕುಲಕ್ಕೆ, ನಾಡಿಗೆ ಕೊಡಲಿ,
ಅಳಿ ನನಗಾಗಿ, ಅರ್ಥತೆಗೆಟ್ಟೋನ್
ಅಳಿ ನನಗೆ!

ಮೇಳ: ರಾಜನ್ ಬರೆ, ಜಯಮಂಗಳಗೀತಂ
ಈಗಳೊ, ರಾಜಾ, ರೋದನಗೀತಂ
ಕಣ್ಣೀರ್ ಸುರಿಸಿ, ಸಾವಿನ ಮನೆಯಳು
ಅಳುವೆವಿದೋ!
೧.೨

ಕ್ಷಯಾರ್ಷ: ಅಳಿ, ಅಳಿ, ಎಲ್ಲಾ ಅಳಲುಕ್ಕುಕ್ಕಿ,
ಅಳಲಿನ ಪಾಡಿನ ತೊರೆಯುಕ್ಕುಕ್ಕಿ;
ಎನ್ನಿನ್ ತಿರುಗಿದನಾ ಮಹದೇವನ್,

ಎಮ್ಮ ಭಾಗ್ಯವನ್ ಕಾವನ್ ದೇವನ್–
ಅಳಿ ನನಗೆ!
ಮೇಳ: ಅಳುವೆವೆ, ಅಳುವೆವೆ, ಅಳಲುಕ್ಕುಕ್ಕಿ,
ಹೊಳಲಿನ, ನಾಡಿನ ಮೊರೆಯುಕ್ಕುಕ್ಕಿ,
ಕಡಲೊಳ್ ಕರಗಿದ ಮಕ್ಕಳ ನೆನೆದು,
ಕಾಡೊಳ್ ಕೊಳೆವಾ ಕಲಿಗಳ ನೆನೆದು,
ಅಳುವೆವಿದೋ!
೨.೧
ಕ್ಷಯಾರ್ಷ: ಯೋನರ್ಗೊಲಿದನ್ ಯುದ್ಧದ ದೇವನ್,
ಆ ಏರೀಸ್!
ಯೋನರ ನಾವೆಗೆ ಬಲ್ಪನ್ ಕೊಟ್ಟನ್,
ಪರ್ಸದ ನಾವೆಗೆ ಕಾಳ್ಕಿಚ್ಚಿಟ್ಟನ್,
ಅಯೊ, ವಿಧಿಯೇ!
ಮೇಳ: ಅಪಪಾ ವಿಧಿಯೇ, ಅಯೊ ಅಯೊ ವಿಧಿಯೇ!
ಕೇಳುವೆ ನಿನ್ನನ್ ಪೇಳೆನಗೆ–
ನಿನ್ನೊಡವೋದಾ ಪಡೆವಳರೆಲ್ಲಿ?
ನಿನ್ನೊಡವೋದಾ ಪಡೆವಳರೆಲ್ಲಿ?
ಇರಿಯಲ್ ಪೋದರ್? ಫರನ್ದಕನೆಲ್ಲಿ?
ಸೌಸಾಸ್, ಪೆಲಗಾನ್, ಸಮ್ಮಿಸ್, ದೊತಮಸ್,
ಆ ಅಗ್ದಬತಸ್, ಸೌಸಿಸ್ಕೇನಿಸ್–
ಎಕ್ಬಟನದ ಪರಿಯರಸುಗಳೆಲ್ಲಿ?
ಪೇಳೆನಗೆ.
೨.೨
ಕ್ಷಯಾರ: ಟಿರಿಯರ ಪಡಗಿನ್ ಪಾರಿದರರೆಗೆ,
ಇನ್ ಪಾರರ್!
ಸಲಮಿಸ್ ಕರೆಯೊಳ್, ಕೂರ್ಗಲ್ಲರೆಯೊಳ್,
ಬಿದ್ದರ್, ಸತ್ತರ್, ತೇಲ್ದರ್ ತೆರೆಯೊಳ್–
ಇನ್ ಬಾರರ್!
ಮೇಳ: ಅಪಪಾ ವಿಧಿಯೇ, ಅಯೊ ಅಯೊ ವಿಧಿಯೇ!
ಕೇಳುವೆನ್ನಿನುಂ, ಪೇಳೆನಗೆ.
ಗೆಲ್ಲಲ್ ಪೋದಾ ಶೂರರದೆಲ್ಲಿ?
ರಾಜಕುಮಾರರ್? ಫ್ರೆನುಖಸ್ಸೆಲ್ಲಿ?
ಅರಿಯೊಮರ್ದ್ದ್, ಸ್ಯೂಲ್ಕೀಸ್, ಲೀಲ್ಯಸ್, ಮೆಂಫೀಸ್,
ಆ ಮಾಸಿಸ್ಟ್ರೀಸ್, ಮತ್ತಾ ಥರುಬಿಸ್,
ಹಿಸ್ತಾಸ್ಪಿಸ್, ಅರ್ತಂಬರನೆಲ್ಲಿ?
ಪೇಳೆನಗೆ!
೩.೧
ಕ್ಷಯಾರ್ಷ: ಅಯೊ, ಅಯೊ, ಏನ್ ಪೇಳ್ವೆನ್.
ಆ ಪಳ ಅಥೆನ್ಸ್ ಕಣ್ಣೊಳ್ ಕಂಡರ್,
ಕಂಡೊರೆ ನುಂಗುವ ಜವನನ್ ಕಂಡರ್,
ಈ ನಲಿಬಾಳನ್ ಕಡೆ ಬೀಳ್ಕೊಂಡರ್,

ಬಯಲಾದರ್.

ಮೇಳ: ಅಲ್ಲಿಯೆ ಬಿಟ್ಟೆಯ ಪರ್ಸದ ಕಣ್ಣ,
ನಿನ್ನ ಮಂತಣದ ನೆಚ್ಚಿನ ಕಣ್ಣ,
ನಿನ್ನಪ್ಪಣೆಯೊಳ್ ಪರ್ಸದ ಜನವ
ಕೋಟಿ ಕೋಟಿಗಳನೆಣಿಸಿಟ್ಟನವ,
ಆ ಅಲ್ಪಿಸ್ತನ ಬಿಟ್ಟೆಯ ಅಲ್ಲಿ?
ಓಬರ, ಅರಸಮಿ, ಪರ್ಥರನಲ್ಲಿ?
ಓ ಓ ದೈವವೆ, ಏನ್ ಕೇಡಾಯ್ತು!
ಪರ್ಸದ ಕಥೆ ತಾನೀ ಪಾಡಾಯ್ತು!

೩.೨

ಕ್ಷಯಾರ್ಷ: ಅಯೊ, ಅಯೊ, ಏನ್ ಕೇಳ್ವಯ್!
ಕೂರಲಗಿಂದಂ ಕೊರಳನ್ ಕೊರೆವಯ್!
ಅಣುಗರ ನೆನೆಯಿಸಿ ಕರುಳನ್ ಕೊರೆವಯ್!
ಬೇಡ, ಬೇಡ, ಎದೆ ಏಕಿಂತಿರಿವಯ್!
ಕೊಯಲಾದರ್!

ಮೇಳ: ಕೇಳ್ವನ್, ಕೇಳ್ವೆನ್, ಮರೆವುದದೆಂತು?
ಆ ಪೊನ್ನಾಳ್ಗಳ ಮರೆವುದದೆಂತು?
ಮರ್ದಿಯರರಸನ್ ಸಾಂಥಸನೆಲ್ಲಿ?
ಕೋಟಿ ಕುದುರೆಯಾ ಸತ್ರಪನೆಲ್ಲಿ?
ನಿನ್ನ ತೇರ ಬಳಿ ಬೆಳ್ಗೊಡೆವಿಡಿದು,
ಭಕ್ತಿಯಿಂದ ಬಹನಾತನದೆಲ್ಲಿ?
ಓ ಓ ದೈವವೆ, ಏನ್ ಸೋಲಾಯ್ತು!
ಪರ್ಸದ ಕಥೆ ತಾನೀ ಪಾಲಾಯ್ತು!

೪.೧

ಕ್ಷಯಾರ್ಷ: ಪೋದರೆಲ್ಲ ಪಡೆವಳರ್.
ಮೇಳ: ಪೋದರೆ ಪೆಸರಿಲ್ಲದೇ!
ಕ್ಷಯಾರ್ಷ: ಅಯೋ, ಅಯೋ, ಅಯೋ, ಅಯೋ–
ಮೇಳ: ಅಯೋ, ಅಯೋ, ದೈವವೇ!
ಉತ್ಸವದೊಳು ನಮ್ಮ ಬರಿಸಿ,
ಮತ್ಸರದೊಳು ತರಿವುದೇ!

೪.೨

ಕ್ಷಯಾರ್ಷ: ತರಿದುದಣ್ಣ, ತರಿದುದು.
ಮೇಳ: ತರಿದುದು ಮತ್ತೇಳೆವೇ!
ಕ್ಷಯಾರ್ಷ: ಚೂರು, ಚೂರು, ತುಂಡು, ತುಂಡು,
ಮೇಳ: ನಮ್ಮ ನಾವೆ ಮುರಿದುದೇ!
ಯವನರಲ್ಲಿ ಕಯ್ಯಮಾಡಿ
ಪರ್ಸದ ಪಡೆ ಕೆಟ್ಟುದೇ!

೫.೧

ಕ್ಷಯಾರ್ಷ: ಎಂತಹ ಪಡೆ! ಕೆಟ್ಟೆ ನಾನು ಕೆಟ್ಟೆನು!
ಮೇಳ: ಎಂತಹ ಸಿರಿ! ಉಳಿದುದೇನು, ಉಳಿದುದು?
ಕ್ಷಯಾರ್ಷ: ಕಾಣ್ಬುದೆ ಈ ಹರುಕುಚಿಂದಿ, ಕಾಣ್ಬುದೆ?

ಮೇಳ: ಕಾಣ್ಬುದೇ, ಕಾಣ್ಬುದೇ.
ಕ್ಷಯಾರ್ಷ: ಅಂಬು ಬರಿದು–ಈ ಹೊದೆ–ಈ ಹೊದೆ?
ಮೇಳ: ಕಾಣ್ಬುದೇ, ಕಾಣ್ಬುದೇ.
ಕ್ಷಯಾರ್ಷ: ಅಂಬುಗಳಾ ಬೊಕ್ಕಸ, ಬೊಕ್ಕಸ?
ಮೇಳ: ಇದೆಯೆ ಇನ್ನು ಪರ್ಸಕೆ ಬಲು ಬೊಕ್ಕಸ?
ಕ್ಷಯಾರ್ಷ: ಇದೆಯೆ–ಪೋಯ್ತು ಅಳ್ಗಳೆಲ್ಲ, ಸಿರಿಗಳು.
ಮೇಳ: ಕಲಿಗಳವರು ಯವನರು–ಕಾಳಗದಲಿ ಹುಲಿಗಳು.

೫.೨

ಕ್ಷಯಾರ್ಷ: ಅರಿದೆನಿಲ್ಲ–ಕಲಿಗಳು, ಕಲಿಗಳು.
ಮೇಳ: ಅವರಿರಿವುದ ಕಂಡೆಯಾ, ಕಂಡೆಯಾ?
ಕ್ಷಯಾರ್ಷ: ಕಣ್ಣಿನಿರಿಯೆ ಕಂಡು ಕಂಡು ಹರಿದೆನೇ!
ಮೇಳ: ಆ–ಆ, ಆ–ಆ.
ಕ್ಷಯಾರ್ಷ: ಕಡಲೊಳಿರಿತ–ನೆಲದೊಳಿರಿತ–ಓ–ಓ.
ಮೇಳ: ಓ–ಓ, ಓ–ಓ.
ಕ್ಷಯಾರ್ಷ: ನಮಗೆ ನೋವು–ಹಗೆಗೆ ನಲಿವು–ಆ–ಆ.
ಮೇಳ: ನಮ್ಮ ಬಲ ಕುಗ್ಗಿತಲಾ–ಆ–ಆ.
ಕ್ಷಯಾರ್ಷ: ಮೆಯ್ಯ ಕಾವಲೊಬ್ಬನಿಲ್ಲದಾದೆನೇ!
ಮೇಳ: ಆದನೇ–ನಮ್ಮ ಚಕ್ರಿ–ಕಾವಲಿಲ್ಲದಾದನೇ!

೬.೧

ಕ್ಷಯಾರ್ಷ: ಕಣ್ಣೀರ ಸುರಿಸಿ ಬನ್ನಿ, ಮನೆಗೆ ನನ್ನನುಯ್ಯುತ.
ಮೇಳ: ಕಣ್ಣೀರ ಸುರಿಸುತಿಹೆವು, ಮನೆಗೆ ನಿನ್ನನುಯ್ವೆವು.
ಕ್ಷಯಾರ್ಷ: ಅಕಟಕಟಾ, ನರಳಿ ನರಳಿ ಪರಿದುಕೊಳ್ಳಿ ಉಡುಪನು.
ಮೇಳ: ಅಕಟಕಟಾ, ನರಳಿ ನರಳಿ ಪರಿದುಕೊಳುವೆವುಡುಪನು.

೬.೨

ಕ್ಷಯಾರ್ಷ: ಬೆಳ್ನವಿರನು ಕೀಳಿ, ಕೀಳಿ, ಹೇಳಿಕೊಳುತ ಅಳಲನು.
ಮೇಳ: ಬೆಳ್ನವಿರನು ಕಿತ್ತು, ಕಿತ್ತು, ಹೇಳಿಕೊಳುವೆವಳಲನು.
ಕ್ಷಯಾರ್ಷ: ಎದೆಯ ಚಚ್ಚಿ, ಚಚ್ಚಿ, ಚಚ್ಚಿ, ಕೆಟ್ಟೆವೆ ಹಾ ಎನ್ನುತ.
ಮೇಳ: ಎದೆಯ ಚಚ್ಚಿ, ಚಚ್ಚಿ, ಚಚ್ಚಿ, ಕೆಟ್ಟೆವೆ ಹಾ ಎಂಬೆವು.

೭.೧

ಕ್ಷಯಾರ್ಷ: ದಾರಿ ತೋರಿ ತಾಯ ಮನೆಗೆ.
ಮೇಳ: ಇತ್ತ ಬಾ.
ಕ್ಷಯಾರ್ಷ: ಅವಮೊಗದೊಳವಳ ನೋಳ್ಪೆ?
ಮೇಳ: ನೋಳ್ಪೆ, ಬಾ.
ಕ್ಷಯಾರ್ಷ: ನನ್ನ ನೋಡಿ ಕರೆವಳೆ ತಾಯ್?
ಮೇಳ: ಕರೆವಳು.
ಕ್ಷಯಾರ್ಷ: ಮೆಲ್ನುಡಿಗಳ ನುಡಿವಳೆ ತಾಯ್?
ಮೇಳ: ನುಡಿವಳು:
ನಲ್ನುಡಿಗಳ ನುಡಿವಳು.

೭.೨

ಕ್ಷಯಾರ್ಷ: ಮತ್ತೆ ಸೂಸ ಮೆರೆವುದೆ ಪೇಳ್?
ಮೇಳ: ಮೆರೆಯಲಿ.

ಕ್ಷಯಾರ್ಷ: ನಮ್ಮ ಪರ್ಸ ಬೆಳೆವುದೆ ಪೇಳ್?
ಮೇಳ: ಬೆಳೆಯಲಿ.

ಕ್ಷಯಾರ್ಷ: ಏಷ್ಯದ ಸಾಮ್ರಾಜ್ಯಕಾರು
ಮೇಳ: ದೇವರೇ.

ಕ್ಷಯಾರ್ಷ: ಸಾಮ್ರಾಜ್ಯವ ಕಾವರಾರು?
ಮೇಳ: ಧರ್ಮವೇ:

ದೈವ ಕಾವ ಧರ್ಮವೇ.